IJCRT.ORG ISSN : 2320-2882

INTERNATIONAL JOURNAL OF CREATIVE RESEARCH THOUGHTS (IJCRT)

An International Open Access, Peer-reviewed, Refereed Journal

# Origin, Growth And Relevanceof Secularism In India

**Dr.Y.Chandrababu**

**ಭಾರತದಲ್ಲಿ ಜಾತ್ಯಾತೀತತೆಯ ಹುಟ್ಟು, ಬೆಳವಣಿಗೆ ಮತ್ತು ಅದರ ಪ್ರಸ್ತುತತೆ**

**ಡಾ.ವೈ.ಚಂದ್ರಬಾಬು**

ಗಂಗಾವತಿ ಭಾಗ್ಯಮ್ಮ ಗ್ರಾಮೀಣ ಪದವಿ ಮಹಾವಿದ್ಯಾಲಯ,

ಹೂವಿನಹಡಗಲಿ–583219

ವಿಶ್ವದಲ್ಲಿ ಭಾರತವು ಜಾಗತೀಕರಣದ ಪರಿಣಾಮ, ಇಪ್ಪತ್ತನೇ ಶತಮಾನ ಮತ್ತು ಇಪ್ಪತ್ತೊಂದನೆಯ ಶತಮಾನಗಳಲ್ಲಿ ಹೆಚ್ಚು ಹೆಚ್ಚು ಸಂಪರ್ಕ ಮತ್ತು ಸಂಬಂಧಗಳನ್ನು ಬೆಳೆಸಿಕೊಳ್ಳುತ್ತಾ ಸಾಗಿದೆ. ಈ ಅವಧಿಯಲ್ಲಿ ವಿಜ್ಞಾನ ತಂತ್ರಜ್ಞಾನಗಳು ಬೆಳೆದು ವಿನಿಮಯಗೊಂಡಿವೆ. ಮಾರುಕಟ್ಟೆಯ ಸಂಸ್ಕೃತಿ ಜಾಗತಿಕ ವಲಯವನ್ನು ಬಹಳ ಹತ್ತಿರಕ್ಕೆ ತರುತ್ತಿದೆ. ಶಿಕ್ಷಣ, ಕೌಶಲ್ಯ, ಉದ್ಯೋಗ, ಸಂಪರ್ಕ ಸಂಬಂಧಗಳ ಕಾರಣದಿಂದ ಪ್ರಪಂಚವ್ಯಾಪಿ ಸಮುದಾಯಗಳು ಹಂಚಿ ಹೋಗುತ್ತಿವೆ. ಇಂತಹ ಕಾಲಘಟ್ಟದಲ್ಲಿಯೂ, ಭಾರತದಲ್ಲಿ ರಾಜಕೀಯ, ಸಾಮಾಜಿಕ ಸ್ಥಾನಮಾನ ಮತ್ತು ಆರ್ಥಿಕ ಬಲವೃದ್ಧಿಯ ಕಾರಣಗಳಿಗಾಗಿ ಜಾತಿ, ಜಾತ್ಯಾತೀತತೆ, ಹಿಂದೂ, ಹಿಂದುತ್ವ, ಅಲ್ಪಸಂಖ್ಯಾತ ಎಂಬ ಪದಗಳು ಬಹಳ ಹಳೆಯ ಪದಗಳಾದರೂ, ಅವುಗಳ ಪ್ರಯೋಜನ ಪಡೆಯುವ ನೆಪದಲ್ಲಿ ನಿರಂತರ ಚರ್ಚೆ, ವಾಗ್ವಾದ, ಅಸಹಿಷ್ಣತೆ, ಬಹಿಷ್ಕಾರ ತಪ್ಪು ಅರ್ಥೈಸುವಿಕೆ ಮೊದಲಾದ ಗೊಂದಲಗಳಲ್ಲಿ ಸದಾ ಪ್ರಸ್ತುತ ವಿಷಯಗಳಾಗಿ ನಮ್ಮ ಮನಸ್ಸಿನ ಜಾಗೃತ ವಲಯವನ್ನು ದ್ವಂದ್ವಕ್ಕೆ ಸಿಲುಕಿಸುತ್ತಲೇ ಬಂದಿವೆ.

ಜಾತಿ, ಜಾತ್ಯಾತೀತತೆಗಳ ಮೂಲವನ್ನು ಭಾರತದಲ್ಲಿ ಹುಡುಕುವಾಗ ಭಾರತದ ಪುರೋಹಿತಶಾಹಿ ಮತ್ತು ರಾಜ್ಯಶಾಹಿ ನಂಬಿಕೆಗಳು, ಆಚಾರವಿಚಾರಗಳು, ರಾಜ್ಯಾಡಳಿತ ಮತ್ತು ಮತಧರ್ಮಗಳ ಸ್ವರೂಪ ಅಧ್ಯಯನ ವಿಷಯಗಳಾಗುತ್ತವೆ. ಅದಕ್ಕೂ ಹಿಂದಿನ ಪುರಾತನ ಜನಸಂಖ್ಯೆಯನ್ನು, ಆ ಜನಸಮುದಾಯಗಳು ಭಾರತದಲ್ಲಿ ನೆಲೆಗೊಂಡ ಕಥನಗಳನ್ನು, ಕಲ್ಪನಾತ್ಮಕ ಸತ್ಯಗಳನ್ನು ಪರಾಮರ್ಶಿಸಬೇಕಾಗುತ್ತದೆ. ಸತ್ಯಶೋಧನೆಯನ್ನು ಇತಿಹಾಸದ ನಿರ್ಮಾಣದಲ್ಲಿ ಪರಿಪೂರ್ಣಗೊಳಿಸಬೇಕಾಗುತ್ತದೆ. ಭಾರತದಲ್ಲಿ ಮೂಲನಿವಾಸಿಗಳು ನಿಷಾಧ ಸಮುದಾಯಗಳು, ಮಾತೃ ಮೂಲವನ್ನು ನಂಬಿ ಆರಾಧಿಸುವ ಪರಂಪರೆಗಳು ಇದ್ದವು ಎಂಬ ನಂಬಿಕೆಯ ಮಾಹಿತಿ ಒಂದಿದೆ. ಕೃಷಿ ವ್ಯವಸ್ಥೆಯನ್ನು ಸಕ್ರಮಗೊಳಿಸಿ ನಾಗರೀಕತೆಗೆ ನಾಂದಿಹಾಡಿದವರು, ಲಿಂಗಪೂಜೆಯ ಸಂಸ್ಕೃತಿ, ಇಂದು ಶಿವನೆಂಬ ಹೆಸರಿನಿಂದ ನಂಬುವ ಪದದ ಮೂಲರೂಪ, ಮಾತಾಪಿತೃಗಳ ಸಮ್ಮಿಲನದ ಸ್ತ್ರೀ–ಪುರುಷ ರೂಪ. ಈ ಸಂಕೇತವನ್ನು ಆರಾಧನಾ  ನಂಬಿಕೆಯ ಹಿನ್ನಲೆಯಲ್ಲಿ ಪ್ರತಿಷ್ಠಾಪಿಸಿ, ಮಾತೃ ಮತ್ತು ಪಿತೃಗಳನ್ನು ಸಮಾನವಾಗಿ ಗುರುತಿಸಿ ಪೂಜಿಸುವ ಅರಿವಿನ ಸಮುದಾಯ ಇತ್ತೆಂಬುದು, ಅವರೇ ದ್ರಾವಿಡರೆಂಬ ಭಾರತೀಯ ಸುಸಂಸ್ಕೃತ ವರ್ಗದವರು. ಇವರು ಸಿಂದೂನಾಗರೀಕತೆಯ ಮೂಲಕರ್ತೃಗಳು ಆಗಿದ್ದರೆಂಬ ನಂಬಿಕೆಯ ಮಾಹಿತಿ ಎರಡನೆಯದಾಗಿದೆ, ಕೊನೆಯದಾಗಿ ಸೂರ್ಯ–ಚಂದ್ರರನ್ನು ಆರಾಧಿಸುತ್ತಾ ಯಜ್ಞ–ಹೋಮಗಳನ್ನು ನಡೆಸುತ್ತಾ ಬರೀ ಪಶುಪಾಲನೆಯ ಮೂಲಕ ಭಾರತಕ್ಕೆ ಬಂದು ದ್ರಾವಿಡರ ಜೊತೆ ಸಂಘರ್ಷವನ್ನು ಬೆಳೆಸಿಕೊಂಡು, ಅವರನ್ನು ದಕ್ಷಿಣಕ್ಕೆ ಓಡಿಸಿದ ಆರ್ಯ ಸಮುದಾಯ ಮೂರನೆಯ ವರ್ಗವೆಂಬ ಮಾಹಿತಿ ಸೋಜಿಗವಾದರೂ ಸತ್ಯಕ್ಕೆ ಹತಿರ್ತವಾಗಿದೆ. ಇವರು ಭಾರತ ಜನಸಮುದಾಯಗಳ ಮೂಲನಿವಾಸಿಗಳ ಜೊತೆ ಬೆರೆತು ಚಾತುರ್ವರ್ಣ ವ್ಯವಸ್ಥೆಯನ್ನು ರೂಪಿಸಿ, ಪುರೋಹಿಶಾಹಿ, ರಾಜ್ಯಶಾಹಿಗಳೆಂಬ ಧಾರ್ಮಿಕ, ರಾಜಕೀಯ ನೆಲೆಗಳನ್ನು ಅಧಿಕೃತಗೊಳಿಸಿದವರು.

ಭಾರತದಲ್ಲಿ ನೆಲೆನಿಂತ ಈ ನಿಷಾಧ, ದ್ರಾವಿಡ ಮತ್ತು ಆರ್ಯ ಸಮುದಾಯಗಳಲ್ಲಿ ವಿವಿಧ ರಾಜಕೀಯ, ಸಾಮಾಜಿಕ ಗುಂಪುಗಳು ಏರ್ಪಟ್ಟು, ಶಕ್ತಿ, ಪ್ರತಿಷ್ಠೆಗಳು ಪ್ರಬಲವಾಗಿ, ಶ್ರೇಷ್ಠ–ಕನಿಷ್ಠವೆಂಬ ಆರೋಪಗಳು ಸಧೃಡವಾಗಿ, ದೇವತೆಗಳು, ದಾನವ–ರಾಕ್ಷಸರು, ಯಕ್ಷರು, ಕಿನ್ನರರು, ನಾಗರು, ಗರುಡರು, ವಾನರರು, ಖೇಚರರು ಮೊದಲಾದಂತೆ  ಹೀಗೆ ಪ್ರಾರಂಬಿಕ ಸಮುದಾಯಗಳು ವಿಂಗಡನೆಯಾಗಿವೆ. ಅವು ತಮ್ಮ ತಮ್ಮ ಅಸ್ತಿತ್ವಕ್ಕಾಗಿ ಸಂಘರ್ಷ, ಹೋರಾಟವನ್ನು ಮಾಡುತ್ತಾ,  ಪ್ರತ್ಯೇಕಗೊಂಡು ವಿವಿಧ ಪ್ರದೇಶಗಳಲ್ಲಿ ಗುಂಪುಗಳಾಗಿ ಒಡೆದಿವೆ. ಸದಾ ಯುದ್ಧಾಕಾಂಕ್ಷಿಗಳಾದ ಈ ಸಮುದಾಯಗಳು ರಾಜಕೀಯ, ಆರ್ಥಿಕ ಬಲಿಷ್ಟತೆಗಾಗಿ ಸೇವಾವಲಯವನ್ನು ನಿರ್ಮಿಸುವ ಹಂತದಲ್ಲಿ ಕೆಲ ದ್ರಾವಿಡ ಮತ್ತು ನಿಷಾಧ ಗುಂಪುಗಳನ್ನು ದಮನಿಸಿ ಶೂದ್ರವರ್ಗವಾಗಿ ಬಂದಿಸಿದ್ದವು. ಅವರಿಗೆ ಆಸ್ತಿ ಹಕ್ಕಿನ ಮೇಲೆ ನಿಷೇಧ ಹೇರುವುದಲ್ಲದೆ,

ರಾಜಕೀಯ, ಆರ್ಥಿಕ ಮತ್ತು ಧಾರ್ಮಿಕ ನಿರ್ಬಂಧಗಳನ್ನು ವಿಧಿಸಲಾಗಿತ್ತು. ಅದನ್ನು ಮತ್ತಷ್ಟು ಬಲಿಷ್ಟಗೊಳಿಸಲು ಚಾತುರ್ವರ್ಣ ವ್ಯವಸ್ಥೆಯನ್ನು ಧಾರ್ಮಿಕ ಆಚಾರಗಳ ನೆಪದಲ್ಲಿ ನಿರ್ಮಿಸಿ ಅಲಿಖಿತ ಸಂವಿಧಾನದಂತೆ ರಚಿಸಲಾಗಿತ್ತು. ಅದನ್ನು ಮೀರದಂತೆ ಹೆದರಿಸುವ, ಭದ್ರಪಡಿಸುವ ಜವಾಬ್ದಾರಿ ರಾಜ್ಯಶಾಹಿಗಿತ್ತು. ಈ ರಾಜ್ಯಶಾಹಿಯನ್ನು ಹೊಗಳುತ್ತಾ ಅವರಿಗಿಂತ ಉನ್ನತ ಸ್ಥಾನವನ್ನು ಪಡೆದು, ನಿರ್ದೇಶನ ನೀಡಿ, ಸಮಾಜವನ್ನು ಅಜ್ಞಾನದಲ್ಲಿ ನೆಲೆಗೊಳಿಸಲು, ರಾಜನನ್ನು ದೇವರ ಸ್ವರೂಪನನ್ನಾಗಿ ಮಾಡುವ ಜವಾಬ್ದಾರಿ ಪುರೋಹಿತವರ್ಗದ್ದು ಆಗಿತ್ತು.

ಕಾಲ ಕ್ರಮೇಣದಲ್ಲಿ ನಡೆದ ಮಾನವ ಸಹಜ ಪ್ರೀತಿ– ಪ್ರೇಮ ಮತ್ತು ಸಾಮರಸ್ಯಗಳಲ್ಲಿ ದ್ರಾವಿಡ ಮತ್ತು ಆರ್ಯ ಸಮುದಾಯಗಳ ಕೆಲ ಗುಂಪುಗಳ ಸಮ್ಮಿಲನ ಧಾರ್ಮಿಕ ಆಚಾರ–ವಿಚಾರಗಳ ಅನುಸಂಧಾನ ನಡೆದಿದೆ. ದ್ರಾವಿಡರ ಪೂಜಾಚರಣೆಗಳು, ಆರ್ಯರ ಯಜ್ಞಯಾಗ–ಹೋಮಗಳು ಪರಸ್ಪರ ವಿನಿಮಯಗೊಂಡು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರಗುಂಪುಗಳು ದ್ರಾವಿಡರಲ್ಲಿಯೂ ಮೊಳೆತು ಪುನರ್ ನಿರ್ಮಾಣಗೊಂಡಿರುವ ಸಾಧ್ಯತೆಗಳು ದಟ್ಟವಾಗಿವೆ. ಆರ್ಯರ ಕಾರಣದಿಂದ ದಕ್ಷಿಣ ಭಾರತ ಸೇರಿದ್ದ ಬಹುತೇಕ ದ್ರಾವಿಡರು ರಾಜ್ಯಶಾಹಿ ವ್ಯವಸ್ಥೆಯನ್ನು ಮತ್ತಷ್ಟು ಭದ್ರ ಪಡಿಸಲು ಆರ್ಯರ ಅರೆಸೊತ್ತಿಗೆ ಅರ್ಥಾತ್ ಪುರೋಹಿತಶಾಹಿಯ ಧಾರ್ಮಿಕ ಸೂತ್ರಗಳನ್ನು ಬೆಂಬಲಿಸಿವೆ. ತಾವೂ ಆರ್ಯೀಕರಣಗೊಂಡ ದ್ರಾವಿಡರಾಗಿದ್ದಾರೆ. ಚಾತುರ್ವರ್ಣ ವ್ಯವಸ್ಥೆಯ ಜೊತೆಗೆ ಆರ್ಯರು ಹುಟ್ಟು ಹಾಕಿದ ಜಾತಿ ವ್ಯವಸ್ಥೆಯನ್ನು ವಿಸ್ತರಿಸಿ, ರಾಜ್ಯಾಶಾಹಿ ಆಡಳಿತವನ್ನು ಸುಗಮಗೊಳಿಸಿಕೊಂಡಿದ್ದಾರೆ. ಇದರಿಂದ ದ್ರಾವಿಡ ಮೂಲದ ಸಮತಾವಾದ ಸಡಿಲಗೊಂಡಿದೆ. ತಾರತಮ್ಯ, ಶೋಷಣೆ ಮಿತಿಮೀರಿದೆ. ಈ ಕಾಲಘಟ್ಟವನ್ನು ಇತಿಹಾಸದಲ್ಲಿ ಸಂಘಂಯುಗವೆಂದು ಹೆಸರಿಸಲಾಗಿದೆ. ಭಾರತದಲ್ಲಿ ಜಾತಿ ವ್ಯವಸ್ಥೆ ಮತ್ತು ಅದರ ಪ್ರಯೋಜನೆಗಳು ಎಂದು ಚರ್ಚಿಸಿದಾಗ ಆ ಪದದ ಮೂಲ ಆಶಯವೇ ಜಿಜ್ಞಾಸೆಯನ್ನು ಮೂಡಿಸುವಂತಹದು.

**ಜಾತಿ:** ಎಂಬುದಕ್ಕೆ ಸ್ಪಷ್ಟ ಅರ್ಥ ಗುಂಪು, ಪ್ರಭೇಧ, ಬೇರೆ ವರ್ಗ ಎಂಬ ನಿಘಂಟು ಅರ್ಥಗಳಿವೆ. ಈ ಅರ್ಥಗಳಲ್ಲಿಯೇ ಹೆಚ್ಚಾಗಿ ಈ ಪದ ಬಳಕೆಯಾಗುತ್ತದೆ. ಒಂದೇ ಮೂಲದ ಸಮುದಾಯ ಎಂಬ ಗ್ರಹಿಕೆಗೆ, ಇದು ಹೆಚ್ಚು ಒತ್ತು ಕೊಡುತ್ತದೆ. ಪ್ರಾಣಿಗಳನ್ನು ಆ ಕಾರಣಕ್ಕೇ ಜಾತಿ ಎಂಬ ಪದದಲ್ಲಿ ಗುರುತಿಸಿ ನಾಯಿಜಾತಿ, ಬೆಕ್ಕುಜಾತಿ, ಹಾಗೆಯೇ ಹಸು, ಆನೆ ಹುಲಿ, ಸಿಂಹ ಮೊದಲಾದ ಹೆಸರುಗಳಲ್ಲಿ ಗುರುತಿಸುತ್ತೇವೆ. ಇವು ಒಟ್ಟಿಗೆ ಇದ್ದು ಸುಖ– ಸಂತೋಷಗಳಲ್ಲಿ ಅವುಗಳು ಮಾತ್ರವೇ ಮುಖ್ಯವಾಗಿ ಜೊತೆಗೂಡುವಂತಹವು, ಶುದ್ಧ ತಳಿಗಳಾಗಿ ಇರುವಂತಹವೆಂಬ ನಂಬಿಕೆಯಲ್ಲಿ, ಅರ್ಥಾತ್ ಸ್ವಾರ್ಥ ಮೂಲದ ಈ ಮನೋ ಭೂಮಿಕೆಯಲ್ಲಿ, ಒಂದೇ ಮೂಲವನ್ನು ಬೆಳೆಸುವ, ಜೈವಿಕ ಹೊಂದಾಣಿಕೆಯನ್ನು ಮಾಡಿಕೊಳ್ಳುವ ಮನೋವೃತ್ತಿವುಳ್ಳ ಗುಂಪಾಗಿ, ಜಾತಿಯವು ಎಂಬ ಅರ್ಥ ಪಡೆದಿವೆ. ಇದು ಜಾತಿ ಪದದಲ್ಲಿ ಅದರ ಹುಟ್ಟಿನ ಮೂಲ ಸ್ವರೂಪದ ಮೊದಲನೆಯದು.

ಎರಡನೆಯದು, ಕೆಲವು ಸಂದರ್ಭಗಳಲ್ಲಿ ಪ್ರಾಣಿಗಳದು ಒಂದೇ ಜಾತಿ–ಗುಂಪು ಮೂಲವಾದರೂ, ಪ್ರಾದೇಶಿಕ ಭಿನ್ನತೆಯಿಂದ ಆಕಾರ, ಬಣ್ಣ, ಗಾತ್ರಗಳಲ್ಲಿ ವ್ಯತ್ಯಾಸವಿರುತ್ತದೆ, ಆ ವ್ಯತ್ಯಾಸದ ಒಂದೇ ರೀತಿ ಅಥವಾ ಬಣ್ಣ, ಆಕಾರದ ಪ್ರಾಣಿಗಳಲ್ಲಿ ಗುಂಪು ಮೂಡುತ್ತದೆ. ಆ ಪ್ರದೇಶ ಅಥವಾ ಆಕಾರದ ಗುಂಪು ಜಾತೀಯವು ಎಂಬ ಗುರುತಿಸುವಿಕೆಯಲ್ಲಿ ಒಂದು ಮೂಲವನ್ನು ದೃಡಪಡಿಸುವ ಸೂಚಕವಾಗಿ ಜಾತಿ ಪದ ಬಳಕೆಯಾಗುತ್ತದೆ. ಉದಾಹರಣೆ– ಮುಧೋಳ ನಾಯಿ, ಬಿಳಿಹುಲಿ, ಬಿಳಿಕರಡಿ ಮೊದಲಾದವು. ಮನುಷ್ಯನು ಇದರಿಂದ ಹೊರತಲ್ಲ. ಅವನು ಸಹ ಈಗೆಯೇ ಗುಂಪುಗಳಲ್ಲಿ ಬದುಕಲು ಪ್ರಯತ್ನಿಸುತ್ತಾನೆ. ಭಾರತದಲ್ಲಿನ ಜಾತಿ ಸೂಚಕ ಪದ, ಇಲ್ಲಿನ ಎರಡನೆಯ ವಿವರಣೆಗೆ ಸಂಬಂಧಿಸಿದ್ದು. ಇಂಗ್ಲೀಷಿನ caste ಎಂಬ ಪದದ ಮೂಲಕ ಜಾತಿ ಪದವನ್ನು ಸಮೀಕರಿಸಿ ಈ ಎರಡನೇ ಅರ್ಥವನ್ನು ಹುಟ್ಟು ಹಾಕಿ ಜಾತಿಯನ್ನು ಪ್ರತ್ಯೇಕ ವರ್ಗವೆಂಬ ಹಂತಕ್ಕೆ ತಂದು ಮುಟ್ಟಿಸಲು ಪ್ರಯತ್ನ ಮಾಡುತ್ತಲೇ ಬರಲಾಗಿದೆ. ಆ ಪ್ರಕಾರವಾಗಿ ಹಲವಾರು ಸಮುದಾಯಗಳ ಅಥವಾ ಗುಂಪುಗಳ ಜನಾಂಗೀಯ ಮೂಲವನ್ನು ಅವರ ಪ್ರದೇಶಮೂಲ, ಬಣ್ಣ, ಆಕಾರಗಳ ಮೂಲ, ವೃತ್ತಿ ಕಸುಬುಗಳ ಮೂಲ, ಸಂಕರ ಸಮುದಾಯಗಳ ಮೂಲ, ಮೊದಲಾದಂತೆ ಪ್ರತ್ಯೇಕ ಗುಂಪುಗಳಲ್ಲಿ ಪ್ರಾದೇಶಿಕ ಮತ್ತು ಸಾಮಾಜಿಕ ವೈಶಿಷ್ಟ್ಯವನ್ನು ಪಡೆದ ಹಿನ್ನೆಲೆಯ ಸಮೂಹವೆಂದು ಗುರುತಿಸಿ, ಜಾತಿ ರೂಪಗಳಲ್ಲಿ ಅದಕ್ಕೆ ಅಸ್ತಿತ್ವವನ್ನು ಕೊಡಲಾಗಿದೆ.

ಆರ್ಯಮೂಲದ ಪುರೋಹಿತಶಾಹಿ ಮತ್ತು ರಾಜ್ಯಶಾಹಿಯ ನಂಬಿಕೆಗಳು, ಭಾರತದ ವಿಭಿನ್ನ ಸಮುದಾಯಗಳನ್ನು ನಿಯಂತ್ರಿಸುವ ಮತ್ತು ಬಗ್ಗು ಬಡಿಯುವ ಸಲುವಾಗಿ ಈ ಜಾತಿ ವ್ಯವಸ್ಥೆಯನ್ನು ಸಾಧ್ಯವಾದ ಕಡೆ ಮತ್ತಷ್ಟೂ ಬೆಳೆಸಿದೆ. ಜಾತಿ ವಿಧಿಗಳಲ್ಲಿ ಒಂದಕ್ಕೊಂದು ಪರಸ್ಪರ ಶ್ರೇಷ್ಠ ಮತ್ತು ಕನಿಷ್ಟಗಳೆಂದು ತಾರತಮ್ಯ ಬೆಳೆಸಿ, ವೃತ್ತಿ ಆಧಾರಿತ ನೆಲೆಗಳನ್ನು ಆಯಾ ಸಮುದಾಯಗಳಲ್ಲಿ ಮಾತ್ರವೇ ಇರುವಂತೆ ನಿರ್ಬಂಧಿಸಿ, ಅದನ್ನು ದುರ್ಬಲ ಮತ್ತು ವಿರೋಧಿ ಸಮುದಾಯಗಳ ಶೋಷಣೆಯ ಅಸ್ತ್ರವಾಗಿಸಿತ್ತೆನ್ನಬಹುದು. ಭಾರತೀಯ ಪುರಾಣಗಳು, ಕಾವ್ಯಗಳು, ಕಟ್ಟುಕಥೆಗಳು ಈ ಕಥೆಯನ್ನು ಪವಾಡ ಸದೃಶದಲ್ಲಿ ವಿವರಿಸುತ್ತವೆ. ವೈಧಿಕ ಮೂಲದ ಶಿಷ್ಟ ಗ್ರಂಥಗಳೂ ಸಹ ಇದರಿಂದ ಹೊರತಾಗಿಲ್ಲ. ಜನಾಂಗೀಯ ಶೋಷಣೆಗೆ ಅವೂ ಹೆಚ್ಚು ಮಹತ್ವ ಕೊಡುತ್ತವೆ, ಶೂದ್ರ ಸಮುದಾಯಗಳ ನಿಯಂತ್ರಣ, ಮಹಿಳಾ ಸಮುದಾಯದ ನಿಯಂತ್ರಣ, ತಾರತಮ್ಯ ಮತ್ತು ಶೋಷಣೆ ಈ ವೈಧಿಕ ಗ್ರಂಥಗಳ ಹಾಗೂ ಪವಾಡ ರೂಪದ ಕಟ್ಟುಕಥೆಗಳ ಪುರಾಣಗಳಲ್ಲಿನ ತಾತ್ಪರ್ಯ. ಬ್ರಾಹ್ಮಣ ಮೂಲದ ವಿವಿಧ ಆಚರಣೆಗಳ ಮೂಲವೂ ಇದೇ ಆಗಿದೆ.

ಪುರುಷ ಪ್ರಧಾನದ ಮೂಲಕ ಮಹಿಳೆಯರ ಶಕ್ತಿಯನ್ನು ಹತೋಟಿಯಲ್ಲಿಡುವುದು ಮತ್ತು ಶೂದ್ರ ಸಮುದಾಯಗಳ ಶೋಷಣೆಯ ಮೂಲಕ ದೇಶೀಯ ಸಂಪತ್ತುಗಳನ್ನು ಸ್ವಾರ್ಥದಿಂದ ತಾವು ಮಾತ್ರವೇ ಅನುಭವಿಸಿ ಸುಖಿಸುವುದು ಅವರ ಉದ್ದೇಶವಾಗಿತ್ತು. ಈ ಪುರೋಹಿತರ ಧಾರ್ಮಿಕ ನಂಬಿಕೆಗಳು ತಮ್ಮ ಭೋಗ ಜೀವನಕ್ಕೂ ಬಹಳೇ ಅನುಕೂಲವಾಗಿದೆಯೆಂದು ಭಾರತದ ವಿವಿಧ ರಾಜ್ಯಶಾಹಿಗಳು ಅವರಿಗೆ ಮತ್ತಷ್ಟೂ ರಕ್ಷಣೆ ನೀಡಿ, ಮೀಸಲಾತಿಯನ್ನು ಕಲ್ಪಿಸಿ, ದಾನ ಪಡೆಯುವ ಹಕ್ಕನ್ನು ಪ್ರಾಪ್ತಿಸಿತ್ತು. ಪಾಳೇಗಾರಿಕೆ, ಭೂಮಾಲಿಕ ಗುಂಪುಗಳು, ಶ್ರೀಮಂತ ವೈಶ್ಯ ಗುಂಪುಗಳು, ಹೀಗೆ ಒಟ್ಟಾಗಿ ಸೇರಿ ದೌರ್ಜನ್ಯ, ದರ್ಪಗಳನ್ನು ಸಾಮಾನ್ಯ ಜನತೆಯ ಮೇಲೆ ತೋರಿಸುತ್ತಾ, ಅವರ ಶೋಷಣೆಯನ್ನು ತಮ್ಮ ಹಕ್ಕಾಗಿ ಮಾಡಿಕೊಂಡವು. ಇಂತಹ ಶೋಷಣೆಯಿಂದ ತಮಗೆ ಅನ್ಯಾಯವಾಗುತ್ತಿದೆ ಎಂದು ತಿಳಿಯುವ ಮತ್ತು

ಪುರೋಹಿತಶಾಹಿ ರೂಪಿಸಿದ ದೇವರು, ಧರ್ಮದ ಭಯದ ಸುಳಿಯಿಂದ ಜಾಗೃತಗೊಳ್ಳುವ ಪ್ರಜ್ಞಾವಂತ ಸಮುದಾಯ ಶೂದ್ರರಲ್ಲಿ ಹುಟ್ಟಲೇ ಇಲ್ಲ. ಏಕೆಂದರೆ ಅವರಿಗೆ ಶಿಕ್ಷಣದ ಕೊರತೆ, ಅಜ್ಞಾನ, ದೌರ್ಜನ್ಯ, ದರ್ಪಗಳ ಹೊಡೆತ, ಅಲೌಕಿಕ ಶಕ್ತಿಗಳಿಂದ ಭಯ ನಿರ್ಮಾಣ ಮಾಡಿರುವಂತದು, ಮಾರ್ಗದರ್ಶನ ನೀಡುವ ವ್ಯಕ್ತಿ ಅಥವಾ ಶಕ್ತಿಗಳು ದೊರೆಯದೆ ಅನಾಥತನ ಕಾಡಿ, ಅಸಹಾಯಕತನ ಏರ್ಪಟ್ಟ ಸನ್ನಿವೇಶಗಳು ಗಮನೀಯವಾಗುತ್ತವೆ.

**ಧರ್ಮ**: ಶಕ್ತಿ ರೂಪದ ದೇವರ ನಂತರದಲ್ಲಿ ಮಾನವನ ನಂಬಿಕೆಗಳ ಅಗತ್ಯಗಳಲ್ಲಿ ಎರಡನೆಯ ವಿಷಯ ಧರ್ಮ. ದೇವರ ನೀತಿ–ನೈತಿಕತೆಗಳಲ್ಲಿ ಧರ್ಮವೂ ಒಂದು ಎಂದು ಮಾನವ ನಂಬುತ್ತಾನೆ. ಕರ್ನಾಟಕದಲ್ಲಿ ಹುಟ್ಟಿದ ಜಗಜ್ಯೋತಿ ಬಸವಣ್ಣ ಹೇಳುವಂತೆ “ದಯವಿಲ್ಲದ ಧರ್ಮದೇವುದಯ್ಯಾ? ದಯವೇ ಬೇಕು ಸಕಳ ಪ್ರಾಣಿಗಳೆಲ್ಲದರಲ್ಲಿ. ದಯವೇ ಧರ್ಮದ ಮೂಲವಯ್ಯಾ” ಎಂದಿದ್ದಾರೆ. ಧರ್ಮದ ಉದ್ದೇಶವೂ ಮೂಲದಲ್ಲಿ ಇದೇ ಆಗಿದ್ದು, ಅದರ ಬೆಳವಣಿಗೆಯ ಹಾದಿಯಲ್ಲಿ ಮತೀಯತನ ಬೆಳೆದಿದೆ. ಸಮುದಾಯಗಳ ಧರ್ಮಗಳಲ್ಲಿ ತಾರತಮ್ಯ ಸಂಘರ್ಷ ಹುಟ್ಟಿದೆ. ಇಂದು ಜಾಗತಿಕ ಮಟ್ಟದಲ್ಲಿ ಮಾನವನ ವಿಭಾಗಿತ ಗುಂಪುಗಳಾಗಿ ಧರ್ಮಗಳು ಕಂಡುಬರುತ್ತವೆ. ಧಾರ್ಮಿಕ ಪುರುಷರ ಸತ್ವಯುತ ಚಿಂತನೆಗಳು, ಜೀವನ ನೀತಿ ಬೋಧನೆಗಳು ಒಂದೊಂದು ಪ್ರಾದೇಶಿಕ ಜನಸಮುದಾಯಗಳ ಆಚಾರ ವಿಚಾರಗಳಾಗಿ, ಮಹತ್ವ ಪಡೆಯುತ್ತಾ ಬಂದಿವೆ. ಅದರಲ್ಲಿಯೂ ಲಿಂಗ, ವರ್ಗಗಳಲ್ಲಿ ತಾರತಮ್ಯ ಉಂಟಾದಾಗ ಸಂಘರ್ಷ ನಡೆದಿವೆ. ಧರ್ಮ ವಿಚಾರಗಳಲ್ಲಿ ಮತ್ತೂ ಉಪ ಮತಬೇಧಗಳು ಉಂಟಾಗಿ ಹಲವು ಉಪ ಅಥವಾ ಧರ್ಮಗಳು ನಿರ್ಮಾಣವಾಗಿರುವುದೂ ಉಂಟು. ಬಹುತೇಕ ಮಧ್ಯ ಏಷ್ಯಾ ಮೂಲ ಭಾಗದ ಸಮುದಾಯಗಳ ಧಾರ್ಮಿಕ ಜೀವನ ಪದ್ಧತಿಗಳನ್ನು ಮುಸ್ಲಿಂ ಹೆಸರಿನಿಂದ, ಯುರೋಪಿಯನ್ ದೇಶ ಸಮುದಾಯಗಳ ಧಾರ್ಮಿಕ ಜೀವನವನ್ನು ಕ್ರಿಶ್ಚಿಯನ್ ಹೆಸರಿನಿಂದ, ಭಾರತದಲ್ಲಿ ಹತ್ತು ಹಲವು ಬುದ್ಧ, ಮಹಾವೀರ ಮೊದಲಾದಂತಹ ಧಾರ್ಮಿಕ ಸಂತರು ನಿರ್ದೇಶಿಸಿದ ಬೌದ್ಧ, ಜೈನ, ಸಿಖ್, ಯಹೂದಿಗಳೆಂದು ಜೀವನ ಪದ್ಧತಿಗಳು, ಧಾರ್ಮಿಕ ಸುಧಾರಣೆಗಳು ಇವೆ. ಇದಲ್ಲದೆ ಈ ಭಾರತ ದೇಶದಲ್ಲಿ ಬಹಳ ಪ್ರಾಚೀನವೆಂದು ಹಿಂದೂ ಮತ್ತು ಹಿಂದುತ್ವಗಳು ದೊಡ್ಡ ಮಟ್ಟದಲ್ಲಿ ಚರ್ಚಿತವಾಗುತ್ತಿರುವ ವಿಷಯವಾಗಿ ಗಂಭೀರವಾಗಿದೆ. ಭಾರತದಲ್ಲಿ ಹುಟ್ಟಿದ, ಇಲ್ಲಿಯೇ ಬೆಳೆದ ವ್ಯಕ್ತಿಗಳನ್ನು, ಅವರ ಜೀವನ, ನಂಬಿಕೆ–ಆಚಾರ ವಿಚಾರಗಳನ್ನು ಅನುಸರಿಸುತ್ತಾ, ಒಂದು ಪರಂಪರೆಯ ಪ್ರಾಥಮಿಕ ಅನುಸಂಧಾನವನ್ನು ಮಾಡಿಕೊಳ್ಳುತ್ತಾ, ವೈಯಕ್ತಿಕ ಬದುಕಿನಲ್ಲಿ ವಿಶಿಷ್ಟತೆಯನ್ನು ಕಾಯ್ದುಕೊಂಡು ಬೆಳೆದು ಬಂದ ಭಾರತೀಯ ಸಮುದಾಯದ ಅಖಂಡ ಧಾರ್ಮಿಕ ಜೀವನದ ಮಹತ್ವವನ್ನು ತಿಳಿಸುವ ಪದ **‘ಹಿಂದೂ’** ಎಂಬುದು ಸಾಮಾನ್ಯ ಅಭಿಪ್ರಾಯ.

ಆದರೆ ಹಿಂದೂ ಎಂಬ ಪದಕ್ಕೆ ಬಹಳ ಪ್ರಾಚೀನವಾದ ಇತಿಹಾಸವಿಲ್ಲ. ಭಾರತದಲ್ಲಿ ವೈದಿಕ ಧರ್ಮ ಇತ್ತು ಎಂಬುದು, ಸನಾತನ ಧರ್ಮ ಇತ್ತು ಎಂಬುದು, ಚಾತುರ್ವರ್ಣ ಧರ್ಮ ಇತ್ತು ಎಂಬುದು, ಮನುಧರ್ಮವಿತ್ತು ಎಂಬುದು, ವೇದಗಳೇ ವೈಧಿಕ ಧರ್ಮದ ಆಧಾರ ಗ್ರಂಥಗಳೆಂದು, ಪ್ರಾಚೀನ ಋಷಿ–ಮುನಿಗಳು ಇವುಗಳ ರಚನೆಕಾರರು, ಅವರೇ ಈ ಧರ್ಮ ಸಂಸ್ಥಾಪಕರು ಎಂಬ ಚಿಂತನೆಗಳಿವೆ. ವೇದಗಳೇ ಸತ್ಯವೆಂಬ ಮಾತೂ ಇದೆ. ಯಜ್ಞ ಯಾಗಾದಿಗಳನ್ನು ಮಾಡುತ್ತ ಪ್ರಜೆಗಳಿಗೆ ಮಾರ್ಗದರ್ಶಕರಾಗಿ ಮುನಿಗಳು ವೈಧಿಕ ಧರ್ಮದ ಕರ್ತೃಗಳು ಎಂಬುದು ಬಹುತೇಕ ಭಾರತೀಯರ ನಂಬಿಕೆ. ಭಾರತೀಯ ಅರೆಸೊತ್ತಿಗೆಯ ರಾಜ್ಯಾಡಳಿತ ಕಾಲದಲ್ಲಿ ರಾಜಾ ಪ್ರತ್ಯಕ್ಷ ದೈವವೆಂಬ ನಂಬಿಕೆಯಲ್ಲಿ, ಆತನ ರಕ್ಷಣೆಯಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರರೆಂಬ ಜನ ಸಮುದಾಯಗಳ ಸಂಘಟನೆಯಲ್ಲಿ ಬೆಳೆಯಿತು ಈ ಸನಾತನ ಧರ್ಮ. ಅನಂತರ ಬೆಳೆದು ಬಂದ ಪಂಚಮನ ಸೇರ್ಪಡೆಯೊಂದಿಗೆ ಭಾರತೀಯ ಜನವರ್ಗ ವೈಧಿಕಧರ್ಮದ ಅಡಿಯಲ್ಲಿ ಬದುಕು ಕಟ್ಟಿಕೊಳ್ಳುವಾಗ, ದೇವರು, ಸಂಪ್ರದಾಯ, ವಿಧಿ–ನಿಷೇಧಗಳು, ಪುನರ್ಜನ್ಮ, ಕರ್ಮಸಿದ್ಧಾಂತ, ಪುರುಷಪ್ರಾಧಾನ್ಯ ಆಚರಣೆಗಳು, ಮೊದಲಾದ ಅಸ್ತ್ರಗಳ ಮೂಲಕ, ಧಾರ್ಮಿಕ ಅಲಿಖಿತ ಶಾಸನಗಳ ಭಯದೊಂದಿಗೆ ವೈಧಿಕ ಧರ್ಮ ಭಾರತೀಯರ ಬದುಕಿನ ಭಾಗವಾಗಿದೆ.

ದೇವರ ಶಿರದಿಂದ ಬ್ರಾಹ್ಮಣನೂ, ತೋಳುಗಳಿಂದ ಕ್ಷತ್ರಿಯನೂ, ಹೊಟ್ಟೆ–ತೊಡೆಗಳಿಂದ ವೈಶ್ಯನೂ, ಪಾದಗಳಿಂದ ಶೂದ್ರನು ಹುಟ್ಟಿದನೆಂದು ಭಾರತದ ಜನ ಸಮುದಾಯದ ವೈಧಿಕರ ಜನ್ಮ ರಹಸ್ಯವನ್ನು ತಿಳಿಸಲಾಗಿದೆ. ಶೂದ್ರ ಸೇವಕ. ಪಶು ಸಮಾನ ಆತನಿಗೆ ಸುಖ ಜೀವನದ ಹಕ್ಕಿಲ್ಲ. ಶ್ರೇಣೀಕೃತವಾದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಸೇವೆಯನ್ನು ಕಾಯಾವಾಚಾಮನಸಾ ಮಾಡಿದಾಗ, ಮರುಜನ್ಮದಲ್ಲಿ ತನ್ನ ಕರ್ಮದಂತೆ ಉನ್ನತವಾದ ಸಮುದಾಯಗಳಾದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರಲ್ಲಿ ಹುಟ್ಟಿ ದೇವರ ಪ್ರೀತಿ, ಸುಖ, ಭೋಗ ಜೀವನ ಅನುಭವಿಸಬಹುದು. ಇಲ್ಲದಿದ್ದರೆ ಇಲ್ಲ. ಬ್ರಾಹ್ಮಣನೇ ಶ್ರೇಷ್ಠ. ಅವನು ವೇದಗಳನ್ನು ನಿರ್ಮಿಸಿದ ಋಷಿಗಳ ಸಂತತಿ ಎಂಬುದು ತರ್ಕ. ಧರ್ಮ ಸುಧಾರಕರೂ ಅವರೇ ಆಗಿದ್ದರು. ಸಂಸ್ಕೃತ ದೇವಭಾಷೆ ಅಂದರೆ ಶ್ರೇಷ್ಠರ ಭಾಷೆ. ಆಡಳಿತ, ಶಿಕ್ಷಣ, ಧಾರ್ಮಿಕಾಚರಣೆಗಳೆಲ್ಲವೂ ಸಂಸ್ಕೃತದಲ್ಲಿಯೇ. ಪ್ರಾದೇಶಿಕ ಭಾಷೆಗಳು ಹತ್ತು ಹಲವು ಶೂದ್ರರಾದ ಜನಸಾಮಾನ್ಯರದು. ಹೆಣ್ಣು ಈ ಧರ್ಮದಲ್ಲಿ ದೈವಿಕವಾದ ಪಾತ್ರ, ಪುರುಷ ಪೋಷಕ, ಪುರುಷನ ಭೋಗವಸ್ತು. ಗೌರವದ ಪತಿವ್ರತೆ, ಗೃಹಿಣಿ. ಮಹಾಸತಿ. ಲಿಂಗತಾರತಮ್ಯವಿದ್ದರೂ ಅದು ದೈವೀ ಇಚ್ಛೆ. “ಮಹಿಳಾ ಮೌನಂ ಸುಖಪ್ರಾಪ್ತಂ” ಆಗಿತ್ತು.

ಋಷಿ–ಮುನಿ ನಿರ್ಮಿತ ವೈಧಿಕ ಧರ್ಮದಲ್ಲಿ ಕಾಲಕಾಲಕ್ಕೆ ದೋಷಗಳನ್ನು ಗುರುತಿಸಿ, ಸುಧಾರಣಾ ತಿದ್ದುಪಡಿಗಳನ್ನು ತಂದಿರುವುದುಂಟು, ಅವುಗಳೇ ಸ್ಮೃತಿಗಳು, ಆಗಮ ಗ್ರಂಥಗಳು, ಧರ್ಮಶಾಸ್ತ್ರ ಗ್ರಂಥಗಳು ಮೊದಲಾದವು. ಇಲ್ಲಿ ಎಷ್ಟೇ ದೋಷ ನಿವಾರಣೆಯನ್ನು ತಂದರೂ, ಅದರಲ್ಲಿನ ಮೂಲ ಸ್ವರೂಪ ಬದಲಾಗಿಲ್ಲ. ಜನ ಸಮುದಾಯಗಳಲ್ಲಿನ ತಾರತಮ್ಯ ಬದಲಾಗಿಲ್ಲ. ಹೆಣ್ಣು–ಗಂಡಿನ ಬೇಧ ತಗ್ಗಲಿಲ್ಲ. ವೃತ್ತಿ–ಕಸುಬು ಆಧಾರಿತ ಖಾಯಂ ಜಾತಿ–ಗುಂಪುಗಳನ್ನು ಪೋಷಿಸಲಾಯಿತು. ಶ್ರಮ ಜೀವಿಗಳು ಕಷ್ಟ ಪಡುವಂತಾದರೆ, ಸುಖಜೀವಿಗಳು ಮತ್ತಷ್ಟು ಭೋಗಾಕಾಂಕ್ಷಿಗಳಾದರು. ದರ್ಪ, ದೌರ್ಜನ್ಯ, ಪಾಳೇಗಾರಿಕೆಗಳು ಹೆಚ್ಚಿದವು. ಶೂದ್ರರಲ್ಲಿ ಮತ್ತೂ ಶೂದ್ರ–ಪಂಚಮ ಅಸ್ಪೃಶ್ಯತೆಗಳು ಹೆಚ್ಚಾಗಿ ಶೋಷಣೆಯ ವಿಧಗಳು ಬೆಳೆದವು. ಹೆಣ್ಣು ರತ್ನವಾಗಿ, ಭೋಗಮಸಾಣಿಯಾಗಿ– ವೇಶ್ಯಯಾಗಿ, ವಂಶವನ್ನು ಹೆತ್ತುಕೊಡುವ ಯಂತ್ರವಾಗಿ ನೆಲೆನಿಂತಳು. ಸ್ವಪ್ರತಿಷ್ಠೆ, ಸ್ವಜನ ಪಕ್ಷಪಾತ, ಅಧಿಕಾರದಾಹಗಳು ಧರ್ಮವನ್ನು ಹಲವು ದಾರಿಗಳಾಗಿ ಸೀಳಿದವು.

ಉತ್ತರ ಭಾರತದ ಮೂಲಕ ಭಾರತಕ್ಕೆ ಮತ್ತೊಂದು ವಿದೇಶದ ಜನಾಂಗ ಪ್ರವೇಶ ಪರ್ಷಿಯನ್ನರು– ಮುಸಲ್ಮಾನರು ಮೊಗಲರ ಹೆಸರಿನಲ್ಲಿ ಪ್ರವೇಶ ಮಾಡಿದರು. ಭಾರತದ ತುಂಬಾ ವಿಸ್ತರಿಸಿ ಭಾರತದ ಜನಾಂಗವಾಗಿಯೇ ಉಳಿದು, ಜಾತಿ ವ್ಯವಸ್ಥೆಗೆ ಪರೋಕ್ಷ ಬೆಂಬಲ ನೀಡುತ್ತಾ ಪುರೋಹಿತಶಾಹಿ ವ್ಯವಸ್ಥೆಗೆ ಸಹಕರಿಸಿದರೇ ಹೊರತು, ಸಾಮಾಜಿಕವಾಗಿ ಕ್ರಾಂತಿಕಾರಿ ಬದಲಾವಣೆಗಳನ್ನು ಮಾಡಲಿಲ್ಲ. ಇವರು ಭಾರತದ ಸಂಪತ್ತನ್ನು ದೋಚಿದರೂ ಭಾರತದಲ್ಲಿಯೇ ಉಳಿದರು. ಮೈಸೂರು ಸಂಸ್ಥಾನದ ಅರಸು ಟಿಪ್ಪು ಸುಲ್ತಾನ್ ಮಾತ್ರ ಮೂಢನಂಬಿಕೆ ಮತ್ತು ಜಾತಿ ವ್ಯವಸ್ಥೆಯ ತಾರತಮ್ಯದ ಬಗ್ಗೆ ಶಾಸನ ರೂಪಿಸಿ ಸುಧಾರಣೆ ತಂದರೆಂಬುದು ಗಮನಾರ್ಹ. ಆದರೂ ಬಹುತೇಕ ಮುಸಲ್ಮಾನ ದೊರೆಗಳು ವೈಧಿಕರ ಘೋರ ಸಂಪ್ರದಾಯಗಳನ್ನು ಖಂಡಿಸಲಿಲ್ಲ. ಇದರ ಪರಿಣಾಮ ಧಾರ್ಮಿಕ ಸಂಘರ್ಷ ಹಿಂದೂ ಹೆಸರಿನಲ್ಲಿ ಒಗ್ಗಟ್ಟು ಪ್ರದರ್ಶನವಾದಂತೆ ಕಂಡರೂ ಸನಾತನ ಮೌಲ್ಯಗಳು ಮಾತ್ರ ಗುರುತಿಸಲ್ಪಟ್ಟವು. ಇದಕ್ಕೂ ಮೊದಲಿನ ಬಹಳ ಹಿಂದಿನ ಚರಿತ್ರೆ ಬುದ್ಧನಿಂದ ಬೌದ್ಧ ಧರ್ಮ ನಿರ್ಮಾಣವಾಗಿದ್ದು ವೈಧಿಕ ಸನಾತನ ಧರ್ಮದ ದೋಷಗಳನ್ನು ಬಯಲಿಗೆಳೆದಿತ್ತು. ವೈಧಿಕ ಅಶ್ವಮೇಧ ಮೊದಲಾದ ಪ್ರಾಣಿಬಲಿ ವ್ಯವಸ್ಥೆಗಳು ಈ ಕಾರಣಕ್ಕೇ ನಿಂತಿರುವುದು ಕಂಡುಬರುತ್ತದೆ. ಮುಂದೆ ಮಹಾವೀರನಂತಹ ಸಂತರು ಹುಟ್ಟಿ ಜೈನ ಧರ್ಮಕ್ಕೆ ಅಸ್ತಿತ್ವ ಬಂದರೂ, ವೈಧಿಕ ಮೂಲದ ನಂಬಿಕೆಗಳಿಂದ ಅದು ಬಹಳ ದೂರವಾಗಲಿಲ್ಲ.

ಆದರೂ ಧರ್ಮ ಸಂಘರ್ಷ ಯುಗ ಪ್ರಾರಂಭವಾಗಿ, ಅದು ದಕ್ಷಿಣ ಭಾರತಕ್ಕೂ ಕಾಲಿಟ್ಟ ಪರಿಣಾಮ ಈ ಸುಧಾರಣಾ ಧರ್ಮಗಳ ಕಾರಣದಿಂದ ದಕ್ಷಿಣದಲ್ಲಿಯೂ ವೈಧಿಕ ಸನಾತನ ಮೂಲದ ಪುರಾಣಗಳ ನಾಯಕರು ವಿಷ್ಣು, ಶಿವ, ಮತ್ತು ಶಕ್ತಿ ಪಂಥಗಳಾಗಿ ಕವಲೊಡೆದು ಆರ್ಯ, ದ್ರಾವಿಡ, ನಿಷಾದ ಗುಂಪುಗಳಾಗಿ ಕಚ್ಚಾಡಿವೆ ವೈಷ್ಣವ, ಶೈವ ಮತ್ತು ಶಕ್ತಿ ಆರಾಧನಾ ಪರಂಪರೆಗಳಾಗಿ ಕುಸ್ತಿಯಾಡಿವೆ. ಬೌದ್ಧ, ಜೈನಧರ್ಮಗಳ ಜೊತೆ ಸಮರ ಸಾರಿವೆ. ನಂತರ ಅವುಗಳಲ್ಲೇ ಸಂಧಾನ ಪ್ರಕ್ರಿಯೆಗಳು ನಡೆದಿವೆ. ಆ ಸಾಲಿನಲ್ಲಿ ನವಪುರೋಹಿತವರ್ಗ ಹುಟ್ಟಿ, ಶಂಕರ, ರಾಮಾನುಜ, ಮಾಧ್ವರ ಮೂಲಕ ಅದ್ವೈತ, ವಿಶಿಷ್ಟಾದ್ವೈತ, ದ್ವೈತ ಪರಂಪರೆಗಳು ಬೆಳೆದಿವೆ. ಶಿಷ್ಟೀಕರಣಗೊಂಡ ಶಕ್ತಿಪೀಠವೂ ಮುಂದುವರೆದಿದೆ. ಈ ಮಾರ್ಗದಲ್ಲಿ ಪುರೋಹಿತ ಸಮುದಾಯ ರಾಜ ಮತ್ತು ಜನತೆಗೆ ಜ್ಞಾನ ಬೋಧಿಸುವ ಸುಶಿಕ್ಷಿತ ವರ್ಗವಾಗಿ ತಮ್ಮ ಅನುಕೂಲಕ್ಕೆ ತಕ್ಕಂತೆ ಧರ್ಮಸೂತ್ರಗಳನ್ನು ಹೆಣೆದಿದೆ. ಬ್ರಾಹ್ಮಣ ಸಮುದಾಯವೇ ಶ್ರೇಷ್ಠವೆಂದು ಬಿಂಬಿಸುತ್ತಾ, ನಾಡು ಅಥವಾ ದೇಶದ ಸುಖ ಸಂತೋಷಕ್ಕಾಗಿ ತಮ್ಮ ಧಾರ್ಮಿಕ ಕಾರ್ಯಗಳೇ ಮಾರ್ಗದರ್ಶನ ಮತ್ತು ವಿನಾಶದಿಂದ ರಕ್ಷಣೆ ನೀಡುವ ಶಕ್ತಿ ಎಂಬ ನಂಬಿಕೆಯನ್ನು ಬೆಳೆಸಿ, ರಾಜಕೀಯ ಮತ್ತು ಆರ್ಥಿಕ ಸ್ಥಾನಗಳಲ್ಲಿ ಮೀಸಲಾತಿಯನ್ನು ಪಡೆಯುತ್ತಾ ಈ ಬ್ರಾಹ್ಮಣರು ಬಂದಿದ್ದಾರೆ. ದಾನ ಸ್ವೀಕರಿಸುವ ಅಧಿಕಾರವೂ ಅವರಿಗೆ ಮಾತ್ರವೇ ಮೀಸಲು ಆದುದರಿಂದ ಸಾಮಾಜಿಕ ಉನ್ನತ ನೆಲೆ ದಕ್ಕಿದೆ. ರಾಜಾಶ್ರಯಗಳನ್ನು ಪಡೆದು, ಉನ್ನತ ಪದವಿಗಳನ್ನು ಪಡೆಯುತ್ತಾ ಬಂದಿರುವುದಲ್ಲದೆ, ದೈಹಿಕ ಶ್ರಮ ಪಡದೆಯೇ, ಜೋತಿಷ್ಯ, ದೇವರು ಧರ್ಮಗಳನ್ನು ತಮ್ಮ ವೃತ್ತಿ ಕಸುಬುಗಳಲ್ಲಿ ಸೆರೆಹಿಡಿದು ಅದನ್ನು ವ್ಯಾಪಾರ, ಕೃಷಿಗಿಂತಲೂ ಶ್ರೇಷ್ಠವೆಂದು ನಂಬಿಸಿ, ಜನರಲ್ಲಿ ದೇವರ ಮಧ್ಯವರ್ತಿಗಳು, ಬ್ರಹ್ಮವಂಶದವರು, ತ್ರಿಲೋಕಜ್ಞಾನಿಗಳು ಎಂಬ ಅಲೌಕಿಕ ಶಕ್ತಿಯ ಭ್ರಮೆಯನ್ನು ಹರಡಲು ಸಶಕ್ತರಾಗಿದ್ದಾರೆ. ಬ್ರಾಹ್ಮಣ ಹತ್ಯೆ ಮಹಾಪಾಪವೆಂಬ ಲೇಪನದಲ್ಲಿಯೂ ರಕ್ಷಣೆಯನ್ನು ಪಡೆದು, ವೃತ್ತಿ ಕಸುಬುಗಳಲ್ಲಿ ಸಾಮುದಾಯಿಕ ತಾರತಮ್ಯವನ್ನು ನೆಲೆಗೊಳಿಸಿ, ಅವುಗಳಿಗೆ ಜಾತಿಗಳ ಮೌಲ್ಯ ನೀಡಿ, ಅವುಗಳ ಮೂಲಕ ಒಡೆದು ಆಳುವ ತಂತ್ರಗಾರಿಕೆ ಈ ಬುದ್ದಿಜೀವಿಗಳ ಸೊಗಸಾದ ರಕ್ಷಣಾ ಕವಚ ಎಂಬುದನ್ನು ಶೂದ್ರ ವರ್ಗಗಳು ಅರ್ಥ ಮಾಡಿಕೊಳ್ಳಲು ಕಷ್ಟವಾಗಿತ್ತು.

ಆದಿ ಮೂಲದ ಮೂರ್ತಿಪೂಜೆ, ಆತ್ಮ ಪೂಜೆ, ಪ್ರಕೃತಿ ಪೂಜೆಗಳು ಶೂದ್ರ ಗುಂಪುಗಳಾದ ಎಲ್ಲಾ ಜಾತಿಗಳಲ್ಲಿ ಬೆಳೆದವು. ಶೂದ್ರರಲ್ಲಿ ದೇವರು, ಧರ್ಮಗಳ ಹುಡುಕಾಟದಲ್ಲಿ ಭಕ್ತಿಪಂಥಗಳೂ ಬೆಳೆದವು. ಮುಕ್ತಿಗೆ ಭಕ್ತಿಯೇ ಸಾಕೆಂಬ ಶರಣರ, ದಾಸರ, ತತ್ವಪದಕಾರರ ವಿಚಾರಗಳಿಂದ ಪ್ರೇರಿತವಾದ ಈ ಜನರು ಮೂರ್ತಿ ಪೂಜೆಯನ್ನು ಖಾಯಂಗೊಳಿಸಿ, ಪ್ರಕೃತಿ ಆರಾಧನೆಯಲ್ಲಿ ಖುಷಿ ಕಂಡರು. ಹೀಗೆ ಬೆಳೆದು ಬಂದ ಭಾರತ ಜಾತಿವ್ಯವಸ್ಥೆಯ ಬಹುತೇಕ ಸಮುದಾಯಗಳಲ್ಲಿ ಧರ್ಮವೆಂಬುದು, ಅನಿವಾರ್ಯದ ಭಾಗವೆಂದು ಅವರಿಗೆ ಅನಿಸಲೇ ಇಲ್ಲ. ಯಾವುದೋ ಗುರುಗಳು ಬಂದು ಧರ್ಮ ಬೋಧನೆ ಮಾಡಬೇಕು, ನಾವು ಅದನ್ನು ಪಾಲಿಸಬೇಕೆಂಬ ಪ್ರಜ್ಞೆಯೂ ಇಲ್ಲದಂತೆ ಅವರು ಬದುಕಿದರು. ಅವರವರಿಗೆ ಅವರದೇ ದೇವರು, ಅವರ ಪೂಜೆ– ಕರ್ಮಗಳೇ ಬೇರೆಯಾಗಿ **ಹಿಂದೂ ಎಂದರೆ ಭಾರತದಲ್ಲಿ ಮೂರ್ತಿ ಪೂಜಾರಾಧಕರೆಂಬ ಕುರುಹು ಮಾತ್ರ ಉಳಿಯಿತು.** ಭಾರತದಲ್ಲಿ ನಿರ್ಮಾಣವಾಗಿದ್ದ ಧರ್ಮ, ಜಾತಿ–ಗುಂಪುಗಳನ್ನು ಒಡೆಯುವ ಪ್ರಯತ್ನ ಮಾಡುತ್ತ, ಜಾತಿಯ ಪರಿಕಲ್ಪನೆಯನ್ನು ಮೀರಲೂ ಸಹ ಪ್ರಯತ್ನಿಸುತ್ತಾ ಬಂದಿರುವ ಕೆಲವೇ ಕೆಲವು ವ್ಯಕ್ತಿ, ಸಂಘಟನೆಗಳು ಭಾರತೀಯ ಇತಿಹಾಸದಲ್ಲಿ ಕಂಡುಬಂದರೂ, ಅವರ ಸಂಹಾರ, ಅವರ ಜಾಗೃತಿಯ ವಿಚಾರಗಳ ಸಂಹಾರವನ್ನು ಪುರೋಹಿತಶಾಹಿಗಳು ಮಾಡಿಸಿದ್ದಾರೆ. ಇಂತಹ ಕುಕೃತ್ಯವನ್ನು ತಮ್ಮಿಂದ ಲಾಭ ಪಡೆದು ತಮ್ಮ ವಿಚಾರಗಳನ್ನು ಧರ್ಮ ಸೂಕ್ಷ್ಮಗಳೆಂದು ನಂಬುವ ರಾಜ್ಯಶಾಹಿಗಳಿಂದ ನಾಶಮಾಡಿಸಿದ್ದಾರೆ. ಈ ನಿರಂಕುಶ ಸಾಮ್ರಾಜ್ಯ ನೇತಾರರ ಕಾಲ ಪುರೋಹಿತಶಾಹಿಗಳಿಗೆ ಸುವರ್ಣಕಾಲ ಮತ್ತು ಜಾತಿ ವ್ಯವಸ್ಥೆಯಿಂದ ಶೂದ್ರವರ್ಗಗಳನ್ನು ಪ್ರಾಣಿಗಳಿಗಿಂತಲೂ ಕಡೆಯಾಗಿ ದುಡಿಸಿ, ಮಾರಾಟದ ಸರಕುಗಳಂತೆ ಅವರನ್ನು ಬಳಸಿಕೊಂಡಿದ್ದ ಈ ಘಟ್ಟ ಯಾರೂ ಮರೆಯಲು ಸಾಧ್ಯವಾಗದ ಯುಗ. ಇಂತಹ ಸಂಧಿಗ್ದ ಯುಗದಲ್ಲಿ **ಬೆಳಕಿನ ಕಿರಣವಾಗಿ** ಇಡೀ ಜಗತ್ತಿನಲ್ಲಿ ಮೊದಲಬಾರಿಗೆ ತಲೆಯೆತ್ತಿದ ಕ್ರಾಂತಿ **ಜಾತ್ಯಾತೀತತೆ– Secularism.**

**ಜಾತ್ಯಾತೀತತೆಯ** ಮೂಲವನ್ನು ಮಾನವೀಯತನದಲ್ಲಿ ಹುಡುಕುವುದು ಶ್ರೇಷ್ಠ ನಿರ್ಧಾರ. ಅದು ಅದರ ಗಟ್ಟಿತನದ ಸ್ವರೂಪ. ಆ ಹಿನ್ನಲೆಯಿಂದ ಭಾರತದಲ್ಲಿ ಬುದ್ಧ ಅದರ ಪ್ರಾರಂಭಿಕ ಕುರುಹಾದರೂ, ಶಿವಶರಣರನ್ನು ಜಾತ್ಯಾತೀತತನದ ಕರ್ತೃವೆಂದು ಗುರುತಿಸಬಹುದು. ಹನ್ನೆರಡನೆಯ ಶತಮಾನದಲ್ಲಿ ಶಿವಶರಣರು ಎಂಬ ಸಮುದಾಯ ವೈಧಿಕ ಸಮಾಜದಿಂದ ಸಿಡಿದೆದ್ದು ಬಂದು ಜಾತ್ಯಾತೀತರಾದರು. ಮಾನವೀಯತೆಗಾಗಿ ಸಂಘಟಿತರಾದರು. ಅದರ ನೇತೃತ್ವವನ್ನು ವಹಿಸಿದ ಶಿವಶರಣ ಬಸವಣ್ಣನೆಂಬ ವಿಚಾರವಾದಿ, ಮಹಾ ಮಾನವತಾವಾದಿಯಿಂದ ಇದು ಪ್ರಾರಂಭವಾಯಿತೆಂಬುದು ಮೊದಲ ಇತಿಹಾಸದ ದಾಖಲೆ. ಜಾತಿ ವ್ಯವಸ್ಥೆಯನ್ನು ಖಂಡಿಸುತ್ತಾ, ಮತಾಚರಣೆಯ ಧರ್ಮವನ್ನು ವಿರೋಧಿಸುತ್ತಾ, ಸಮತಾಸಮಾಜವನ್ನು ಕಟ್ಟುವ ಭರದಲ್ಲಿ, ಸ್ವಾತಂತ್ರ್ಯ, ಸಮಾನತೆ, ಸಹೋದರತನಗಳ

ಮೂಲಕ ವಿಶ್ವ ಭ್ರಾತೃತ್ವಗಳಿಗೆ ಮುನ್ನುಡಿ ಬರೆದವರು ಅವರು. ಮೊದಲ ಬಾರಿಗೆ ದೇವರು, ಧರ್ಮ ಮತ್ತು ಜಾತಿ ಸಮಾಜಗಳಿಗೆ ನಿಜವಾದ ಅರ್ಥ ಸ್ವರೂಪಗಳನ್ನು ತಮ್ಮ ವಚನಗಳು ಎಂಬ ಮಾಧ್ಯಮದ ಮೂಲಕ ನೀಡಿದರು. ಅನುಭವ ಮಂಟಪವೆಂಬ ಸಾಮೂಹಿಕ ಗುರುಕುಲ ಶಿಕ್ಷಣ ಕೇಂದ್ರವನ್ನು ಸಾಪಿಸಿ, ಸರ್ವ ಜಾತಿಗಳಿಗೂ ಅವಕಾಶವನ್ನು ಕಲ್ಪಿಸಿ, ಗುರು ಶಿಷ್ಯವೆಂಬ ಬೇಧ ತೊರೆದು, ಸಮಾನ ಅಭಿವ್ಯಕ್ತಿ ಸ್ವಾತಂತ್ರಕ್ಕೆ ಅವಕಾಶವನ್ನು ಕಲ್ಪಿಸಿ, ಮಹಿಳೆಯರನ್ನೂ ಸಹ ಅದರ ಸದಸ್ಯರನ್ನಾಗಿ ಮಾಡಿಕೊಂಡು ವಿಶ್ವ ಜಾಗತಿಕ ಸುಧಾರಣೆಗೆ ಮೂಲಕರ್ತೃವಾದರು. ಪುರೋಹಿತಶಾಹಿಗೆ ಮೊದಲ ಪೆಟ್ಟು ನೀಡಿದರು. "ಕಾಸಿ ಕಮ್ಮಾರನಾದ ಬೀಸಿ ಮಡಿವಾಳನಾದ" "ಸೆಟ್ಟಿಯೆಂಬನೆ ಸಿರಿಯಾಳನ, ಮಡವಾಳನೆಂಬನೆ ಮಾಚಯ್ಯನ, ಡೋಹರನೆಂಬನೆ ಕಕ್ಕಯ್ಯನ, ಮಾದಾರನೆಂಬನೆ ಚೆನ್ನಯ್ಯನ, ಆನು ಹಾರುನೆಂದರೆ ಕೂಡಲ ಸಂಗಯ್ಯ ನಗುವನಯ್ಯಾ" ಎಂಬ ಮಾತುಗಳಲ್ಲಿ ಜಾತಿ ವಿಮರ್ಶೆಯನ್ನು ಮಾಡುತ್ತಾನೆ. ಆ ಜಾತ್ಯಾತೀತ ನಿಲುವನ್ನು ಜಗತ್ತಿಗೆ ತೋರಿಸುವ ಪ್ರಯತ್ನವನ್ನು ವಚನಗಳು ಎಂಬ ಸಾಹಿತ್ಯದಿಂದ ಸಾರ್ವಕಾಲಿಕಗೊಳಿಸುತ್ತಾರೆ. ಆದರೆ ಜಗತ್ತಿನಲ್ಲಿ ಅಜ್ಞಾನದ ಕತ್ತಲಿನ ಗಾತ್ರ ದೊಡ್ಡದು, ಅದು ಬೆಳಕನ್ನು ನುಂಗಲು ಸದಾ ಹವಣಿಸುತ್ತಿರುತ್ತದೆ ಎಂಬಂತೆ, ಪುರೋಹಿತಶಾಹಿಯ ಪಿತೂರಿಗಳಿಂದ ಶರಣರು ತೋರಿದ ಬೆಳಕು, ಸಣ್ಣದಾಗುತ್ತಾ ಸಾಗಿತು. ಪುರೋಹಿತಶಾಹಿಗಳ ಬಲೆಯಲ್ಲಿ ಶರಣರ ಬೆಳಕೆಂಬ ಚಳುವಳಿ ಮೋಸ, ವಂಚನೆಯ ಸುಳಿಗೆ ಸಿಕ್ಕಿ ಕಮರಿಹೋಗುತ್ತದೆ. ಜಾತಿ, ಮತೀಯತೆಗಳು ಧರ್ಮದ ಭಾಗವಾಗಿ ಬೆಳೆಯುತ್ತದೆ.

ಅನಂತರ ಭಾರತದಲ್ಲಿ ಜಾಗತಿಕ ಸ್ವರೂಪದ ಜಾತ್ಯಾತೀತತೆ ಬೆಳೆಯಲು ಕಾರಣವಾದ ಮತ್ತೊಂದು ಕಾಲಘಟ್ಟ ಹದಿನೆಂಟನೆಯ ಮತ್ತು ಹತ್ತೊಂಬತ್ತನೆಯ ಶತಮಾನ. ಯುರೋಪಿಯನ್ನರ ವ್ಯಾಪಾರ, ಭಾರತಕ್ಕೆ ಅವರ ಆಗಮನ, ಭಾರತದಲ್ಲಿ ಅವರ ಆಡಳಿತ ಭಾರತೀಯರಿಗೆ ಇದುವರೆಗೂ ತಾವು ಶೂದ್ರವರ್ಗಗಳಿಗೆ ಕೊಡುತ್ತಿದ್ದ ಗುಲಾಮೀತನದ ಅನುಭವವನ್ನು ನೀಡಿದವು. ಅದರಿಂದ ಪುರೋಹಿತಶಾಹಿ, ರಾಜ್ಯಶಾಹಿಗಳು ತರಗುಟ್ಟಿ ಹೋಗಲು ಕಾರಣವೂ ಆಯಿತು. ಬ್ರಿಟೀಷರು ಭಾರತದ ಸಂಪತ್ತನ್ನು ಲೂಟಿ ಮಾಡುವುದು ಒಂದು ಕಡೆಯಾದರೆ, ಅವರ ಆಡಳಿತದ ಕೆಲವು ನಿರ್ಧಾರಗಳು ಭಾರತೀಯ ಪುರೋಹಿತಶಾಹಿಯ ತಂತ್ರಗಾರಿಕೆಗಳನ್ನೂ ಬೆಚ್ಚಿ ಬೀಳಿಸುವಂತೆ ಸಾರ್ವತ್ರಿಕವಾಗಿದ್ದವು. ಇಡೀ ಭಾರತವನ್ನು ಏಕ ಆಡಳಿತಕ್ಕೆ ಒಳಪಡಿಸಿದ್ದು, ಬ್ರಿಟನ್ನಿನ ಮೂಲಕ ಅದರ ಆಡಳಿತ ಸೂತ್ರಗಳು ಜಾರಿಯಾಗುತ್ತಿದ್ದ ವ್ಯಾಪಕತೆ, ನೇರ ಪಿತೂರಿ ಒತ್ತಡಗಳಿಗೆ ಮಣಿಯದ ದೂರಗಾಮಿ ಯೋಜನೆಗಳು, ಜಾತಿ, ವರ್ಗ, ಧರ್ಮದ ಹೆಸರಿನಲ್ಲಿಯೇ, ಜಾತ್ಯಾತೀತತೆಯ ಬೇರುಗಳಿಗೆ ನೀರನ್ನು ಸುರಿಯಿತು. ಬ್ರಿಟೀಷರು ನೇರವಾಗಿ ಭಾರತೀಯ ಜಾತಿ ವ್ಯವಸ್ಥೆಯ ನಿರ್ಮೂಲನೆಗೆ ಯೋಜನೆಗಳನ್ನು ತರದಿದ್ದರೂ, ಸಾರ್ವತ್ರಿಕ ಶಿಕ್ಷಣವನ್ನು ಎಲ್ಲಾ ಸಮುದಾಯಗಳು ಕಲಿಯಲು ಅವಕಾಶ, ವಾತಾವರಣವನ್ನು ನಿರ್ಮಿಸಿದರು. ದೇಶೀಯ ಅಭಿವೃದ್ಧಿ, ಮಾನವ ಸಂಪನ್ಮೂಲದ ನಿರ್ಮಾಣ ಕುರಿತ ಅವರ ಆಲೋಚನೆಗಳು, ಕ್ರಿಶ್ಚಿಯನ್ ಧರ್ಮ ಪ್ರಸಾರದ ಉತ್ಸಾಹಕತೆ ಸಹಜವಾಗಿ ಶೋಷಿತ ಶೂದ್ರ ವರ್ಗದವರೂ ಶಿಕ್ಷಣ ಪಡೆಯಲು ಸಾಧ್ಯವಾಯಿತು.

ಮುಂದೆ ಬ್ರಿಟೀಷರ ವಿರುದ್ಧ ಸ್ವಾತಂತ್ರ್ಯ ಸಂಗ್ರಾಮದ ಹೋರಾಟ, ಇಡೀ ದೇಶೀಯ ಸಮುದಾಯಗಳ ಒಕ್ಕೂಟ, ಮತ್ತು ಒಗ್ಗಟ್ಟಿನ ಅನಿವಾರ್ಯತೆ ಸಹಜವಾಯಿತು. ಪುರೋಹಿತ ಮತ್ತು ರಾಜ್ಯಶಾಹಿ  ವ್ಯವಸ್ಥೆಯಲ್ಲಿ ಕಡೆಗಣಿಸಲ್ಪಟ್ಟ ಸಮುದಾಯಗಳೂ ಸಹ ಬ್ರಿಟೀಷರ ಹೋರಾಟಕ್ಕೆ ಅನಿವಾರ್ಯವಾದವು. ಬ್ರಿಟೀಷರು ಭಾರತೀಯರ ಆಡಳಿತದ ಅಧಿನೇತಾರರಾಗಿದ್ದರಿಂದ ಹೋರಾಟದಲ್ಲಿ ಭಾರತೀಯರ ಮಧ್ಯೆಯೇ ಎಷ್ಟೋ ಸಂದರ್ಭಗಳಲ್ಲಿ ಸಂಘರ್ಷ ನಡೆದಿದೆ.  ಸ್ವಾತಂತ್ರ್ಯ ಹೋರಾಟದ ನಡುವೆಯೇ ಭಾರತೀಯ ಹಿಂದೂ ಧರ್ಮ, ಪುರೋಹಿತ ವರ್ಗಗಳ ತಾರತಮ್ಯಗಳು ಟೀಕೆಗೆ ಒಳಗಾಗಿ ಸುಧಾರಣೆಗಳೂ ನಡೆದವು. ಮಹಿಳೆಯರ ಶೋಷಣೆಗೆ ಕಾರಣವಾದ ಎಷ್ಟೋ ಧಾರ್ಮಿಕ ಕಟ್ಟುಪಾಡುಗಳ ಸಡಿಲತೆಗೆ ಒತ್ತುಕೊಡಲಾಯಿತು. ಸತೀಸಹಗಮನ, ಬಾಲ್ಯವಿವಾಹದಂತಹ ಪಿಡುಗುಗಳಿಗೆ ಚಿಕಿತ್ಸೆ ನೀಡಲಾಯಿತು. ಆ ಸಾಲಿನಲ್ಲಿ ಜಾತಿ ವಿಷಯವೂ ಚರ್ಚೆಯಾಗಿ, ಅದನ್ನು ಮೀರುವ ಪ್ರಯತ್ನಗಳು ಸಹ ದೇಶದ ಹಲವು ಕಡೆ ನಡೆದವು. ಮೈಸೂರು ಒಡೆಯರಲ್ಲಿ ನಾಲ್ವಡಿ ಕೃಷ್ಣದೇವರಾಜ ಒಡೆಯರ್, ಮಹಾರಾಷ್ಟ್ರದ ಶಾಹು ಮಹಾರಾಜ್, ರಾಮಮನೋಹರ ಲೋಹಿಯಾ, ಜೋತೀಬಾಪುಲೇ  ಡಾ.ಬಿ.ಆರ್..ಅಂಬೇಡ್ಕರ್ ಮೊದಲಾದಂತೆ ಹಲವಾರು ವೈಚಾರಿಕ ಚಿಂತಕರು ಜಾತಿಯನ್ನು ವಿರೋಧಿಸಿದರು. ಅದರಿಂದ ಆಗುತ್ತಿದ್ದ ಅನ್ಯಾಯ, ಶೋಷಣೆಗಳನ್ನು ತೆರೆದಿಟ್ಟರು. ಅದನ್ನು ನಿವಾರಿಸಲು ಪ್ರಯತ್ನಿಸಿ, ರಾಜಕೀಯ ಉದ್ದೇಶಕ್ಕಿಂತಲೂ ಮುಖ್ಯವಾಗಿ ಸಮಾಜ ಸುಧಾರಣೆಗೆ ಅವರು ಹೆಚ್ಚು ಒತ್ತು ಕೊಟ್ಟರು. ಜಾತಿ ವಿನಾಶದ ಹೋರಾಟಕ್ಕೆ ದುಡಿದರು. ಜಾಗೃತಿ ಮೂಡಿಸಲು ಪ್ರಯತ್ನಿಸಿದರು. ಮಹಾತ್ಮ ಗಾಂಧೀಜಿಯವರೂ ಸಹ ಕೊನೆಕೊನೆಗೆ ಸ್ವಾತಂತ್ರ್ಯ ಹೋರಾಟದ ಜೊತೆ ಹಿಂದೂಧರ್ಮದ ದೋಷನಿವಾರಣೆಗೆ ಸಲಹೆಗಳನ್ನು ನೀಡಿದರು. ಜಾತಿ ವ್ಯವಸ್ಥೆಯಲ್ಲಿಯೇ ಕೆಲಹಂತದ ಪರಿಶಿಷ್ಟರನ್ನು ಹರಿಜನರೆಂದು ಕರೆದು, ಜಾತ್ಯಾತೀತತೆಯ ನಿಲುವಿಗೆ ಕೈ ಜೋಡಿಸಲು ಪ್ರಯತ್ನಿಸಿದರು.

ಭಾರತದಲ್ಲಿ ಸ್ವಾತಂತ್ರ್ಯಪೂರ್ವಕ್ಕಿಂತಲೂ ನಂತರದ ದಿನಗಳಲ್ಲಿ ಸಾರ್ವತ್ರಿಕ ಶಿಕ್ಷಣ, ಶೂದ್ರ ಸಮುದಾಯಗಳ ಅರ್ಥಾತ್ ಹಿಂದುಳಿದ, ಪರಿಶಿಷ್ಟಜಾತಿಗಳ ಸಮುದಾಯಗಳಲ್ಲಿ ಮೂಡಿದ ಜಾಗೃತಿಗಳ ಪರಿಣಾಮ ಜಾತ್ಯಾತೀತತೆಗೆ ಹೆಚ್ಚು ಒತ್ತು ದೊರೆಯಿತು. ಅದಲ್ಲದೆ ಭಾರತದ ಜನಸಮುದಾಯಗಳಲ್ಲಿ ಹಿಂದೂ, ಮುಸ್ಲಿಂ, ಪಾರಸಿ, ಆಂಗ್ಲೋ ಇಂಡಿಯನ್, ಸಿಖ್, ಜೈನ, ಮಂಗೋಲಿಯನ್ ಮೂಲದ ನೇಪಾಳಿ, ಅಸ್ಸಾಮಿ, ಮಣಿಪುರಿ ಮೊದಲಾದ ಜನಾಂಗಗಳು, ಸಂಸ್ಕೃತಿಗಳು ಈ ದೇಶದ ಮೂಲನಿವಾಸಿಗಳಾಗಿ ಹೆಸರು ಪಡೆದರು. ಆ ಎಲ್ಲಾ ಸಮುದಾಯಗಳ ಜೊತೆ ಸಾಮರಸ್ಯ, ಸಹೋದರತನಗಳು ಅನಿವಾರ್ಯವಾದವು. ಪುರೋಹಿತಶಾಹಿ ಸಂಸ್ಕೃತಿಗಳಿಂದ ನಿರಂತರ ಶೋಷಣೆ, ಅವಮಾನ. ದೌರ್ಜನ್ಯಗಳಿಗೆ ಒಳಗಾಗಿದ್ದ. ಡಾ.ಬಿ,ಆರ್.ಅಂಬೇಡ್ಕರ್ ಅವರು ಸ್ವಾತಂತ್ರ್ಯ ಬಂದ ನಂತರ ರಚನೆಯಾದ ದೇಶದ ರಾಜ್ಯಾಂಗ ನಿರ್ಮಾಣದ ಸದಸ್ಯರಾಗಿ, ಸಂವಿಧಾನದ ಕರಡು ರಚನಾ ಮುಖ್ಯಸ್ಥರಾದ ಹಿನ್ನಲೆಯಲ್ಲಿ ಜಾತ್ಯಾತೀತ ನಿಲುವುಗಳಿಗೆ ಹೆಚ್ಚಿನ ಮಹತ್ವ ದೊರಕಿತು.

ಭಾರತೀಯ ಮುಸ್ಲಿಂಲೀಗ್‌ನ ಒತ್ತಡಕ್ಕೆ ಮಣಿದು ಪಾಕೀಸ್ಥಾನ ರಚನೆಗೆ ಬ್ರಿಟೀಷರು ಒಪ್ಪಿ ದೇಶ ವಿಭಜನೆಯಾಗಿತ್ತು. ಅದೇ ಸಂದರ್ಭದಲ್ಲಿ ಸ್ವಾತಂತ್ರ್ಯ ಕೊಡುವ ನಿರ್ಧಾರದಲ್ಲಿ ಬ್ರಿಟೀಷರು ನಡೆಸಿದ ದುಂಡುಮೇಜಿನ ಪರಿಷತ್ತು ಸಮಾವೇಶದಲ್ಲಿ ಡಾ.ಬಿ.ಆರ್.ಅಂಬೇಡ್ಕರ್‌ರವರು ನುಡಿದ ಮಾತುಗಳು "ಈ ಭಾರತ ದೇಶದಲ್ಲಿ ಪರಿಶಿಷ್ಟರಾದ ನಮಗೆ ಸ್ವಾತಂತ್ರ್ಯವಿಲ್ಲ, ಸಮಾನತೆಯಿಲ್ಲ, ನಾಯಿ, ಬೆಕ್ಕು ಪಶುಗಳಿಗಿರುವ ಗೌರವವೂ ಇಲ್ಲ. ನಿಮ್ಮ ಆಡಳಿತದ ನಂತರ ನಮ್ಮ ಜೀವನ, ಸಮೃದ್ಧಿಯ ಕಡೆ ಸಾಗಬೇಕಾದರೇ, ಮುಸ್ಲಿಮರಿಗೆ ಕೊಟ್ಟಂತೆಯೇ ಪ್ರತ್ಯೇಕ ರಾಷ್ಟ್ರದ ಅಗತ್ಯವಿದೆ" ಎಂಬ ಬೇಡಿಕೆ ಇಟ್ಟಿದ್ದರು. ಇದರಿಂದ ಘಾಸಿಗೊಂಡ ಮಹಾತ್ಮಗಾಂಧೀಜಿಯವರು ಉಪವಾಸ ಸತ್ಯಾಗ್ರಹ ಮಾಡಿ, ಅಂಬೇಡ್ಕರ್ ಅವರ ಮನಸ್ಸು ಗೆಲ್ಲುವಲ್ಲಿ ಸಫಲರಾಗಿದ್ದರು. ಅಷ್ಟೇ ಅಲ್ಲದೇ ಅವರ ಜೊತೆಗಿನ ಮಾತುಕತೆಯಲ್ಲಿ 'ಪೂನಾದಲ್ಲಿ ನಡೆದ ಒಪ್ಪಂದದ' ಪ್ರಕಾರ ಡಾ.ಬಿ.ಆರ್.ಅಂಬೇಡ್ಕರ್ ಅವರ ಬೇಡಿಕೆ, ಗಾಂದೀಜಿಯವರು ನೀಡಿದ ವಚನದಂತೆ, ಪರಿಶಿಷ್ಟರಿಗೆ ಪ್ರತ್ಯೇಕ ರಾಜಕೀಯ ಮೀಸಲು, ಅದಕ್ಕೆ ಭಾರತೀಯ ಕಾಂಗ್ರೆಸ್ಸಿನ ಒಪ್ಪಿಗೆಯೂ ದೊರೆತಿತ್ತು. ಜೊತೆಗೆ ಜಾತ್ಯಾತೀತ ಭಾವನೆಗೆ ಉತ್ತೇಜನವೂ ಈ ಸಂದರ್ಭದಲ್ಲಿ ಮುಖ್ಯವಾಗಿದ್ದವು. ಇಂತಹ ಸುಧಾರಣೆಗಳನ್ನು ಡಾ.ಬಿ.ಆರ್.ಅಂಬೇಡ್ಕರ್ ಅವರು ತಮ್ಮ ರಚನೆಯ ಸಂವಿಧಾನದಲ್ಲಿ ಬಹಳ ಸೊಗಸಾಗಿ ನಿರ್ವಹಿಸಿದ್ದಾರೆ. ಸ್ವಾತಂತ್ರ್ಯ, ಸಮಾನತೆ, ಬ್ರಾತೃತ್ವ ಮತ್ತು ಜಾತ್ಯಾತೀತತೆಗಳು ಭಾರತೀಯ ಸಮಾಜದ ಚತುರ್ಮುಖ ಕಣ್ಣಗಳು ಆಗಿವೆ. ಭಾರತೀಯ ಪ್ರಜಾಪ್ರಭುತ್ವದ ಆಧಾರ ಸ್ಥಂಭಗಳು ಅವುಗಳಾಗಿವೆ. ಹಲವಾರು ಧರ್ಮ, ಸಂಸ್ಕೃತಿ, ಜಾತಿಗಳನ್ನು ಇನ್ನೂ ಅಸ್ಥಿತ್ವದಲ್ಲಿ ಉಳಿಸಿಕೊಂಡಿರುವ ಭಾರತಕ್ಕೆ ಜಾತ್ಯಾತೀತತೆಯ ತತ್ವ ಅನಿವಾರ್ಯ, ಅಗತ್ಯವಾಗಿದೆ.

ಇಂಗ್ಲೀಷಿನ Secular ಎಂಬ ಪದದ ಸಂವಾದಿಯಾಗಿ ಜಾತ್ಯಾತೀತತೆಯ ಪದವನ್ನು ಬೆಳೆಸಿಕೊಂಡು, ಗೋತ್ರ, ಕುಲ, ಕೋಮು, ವಂಶಗಳಿಗೆ ಮಹತ್ವ ಕೊಡದೆ, ಎಲ್ಲರಿಗೂ ಸುರಕ್ಷತೆ, ನಿಶ್ಚಿಂತೆ, ನಿರ್ಭಯ, ರಕ್ಷಣೆ ನೀಡುವ ಜವಾಬ್ದಾರಿಯನ್ನಿಟ್ಟುಕೊಂಡು, ಮಾನವನ ಬೌದ್ಧಿಕ ಶಕ್ತಿಯನ್ನು ಪ್ರಗತಿಪರವಾಗಿ ದುಡಿಸಿಕೊಂಡು ಬೆಳೆಯುವ, ಮತದ ಹೆಸರಿನ ಧರ್ಮಕ್ಕೆ, ಜಾತಿಗೆ ಲಕ್ಷ್ಯಕೊಡದೆ, ಸರ್ವರಲ್ಲಿಯೂ ಬ್ರಾತೃತ್ವವನ್ನು ವೃದ್ಧಿಸುವ ಮನೋಭೂಮಿಕೆಯನ್ನು ರೂಪಿಸುವ ಚಿಂತನೆಯೇ ಜಾತ್ಯಾತೀತತೆ. ರಾಜ್ಯಾಡಳಿತ, ನೀತಿ, ಶಿಕ್ಷಣ ಮುಂತಾದುವುಗಳಲ್ಲಿ ವೈಯಕ್ತಿಕ ಆಚರಣೆಯ ಧರ್ಮದ ಪ್ರಭಾವವನ್ನು ತರದಿರುವ, ಮಾನವ ಲಿಂಗ, ಜಾತಿ, ಕೋಮು, ವರ್ಗಗಳ ಸ್ವಾತಂತ್ರ್ಯ, ಸಮಾನತೆಗಳಲ್ಲಿ ತಾರತಮ್ಯ ಮಾಡದಿರುವ ಮನೋಭೂಮಿಕೆಯನ್ನು ಬೆಳೆಸುವುದೇ ಈ ಜಾತ್ಯಾತೀತತೆ. ಇದು ಮಾನವನ ಸತ್ಯಶೋಧನೆಯ, ಪೂರ್ವಗ್ರಹ ಪೀಡಿತವಲ್ಲದ, ಜಾತಿ ಸೂಚಕ ಪಕ್ಷಪಾತವಿಲ್ಲದ ಶಿಕ್ಷಣದಿಂದ ಮಾತ್ರ ಸಾಧ್ಯ. ಇದೊಂದು ಸತ್ಯಮಾರ್ಗದ ಹಾದಿ. ನಿರಂತರ ಅನ್ವೇಷಣ ಗುಣದ ಸಾಧನೆಯಿಂದ ಮಾನವ ಜೀವನವನ್ನು ಕುರಿತು ಅಧ್ಯಯನ ಮಾಡಿ ಗ್ರಹಿಸಿಕೊಂಡಾಗ ಮಾತ್ರ, ದಕ್ಕಿಸಿಕೊಳ್ಳುವ ಮಾನವ ಜ್ಞಾನವಿದು. ಮಾನವೀಯತೆಗಾಗಿ ಮಿಡಿಯುವ ಸಹೃದಯನ ಅರಿವಿನ ಗುರು ಈ ಜಾತ್ಯಾತೀತತೆ.

ಭಾರತ ಇತಿಹಾಸವನ್ನು ಗಮನಿಸಿದಾಗ, ಕೆಲವು ಸಂದರ್ಭಗಳಲ್ಲಿ ಸರಿಯಾದ ವೈಚಾರಿಕ ಶಿಕ್ಷಣ ದೊರೆಯದೆ, ಮಾರ್ಗದರ್ಶನ ಸಿಗದೆ, ಅಸತ್ಯಗಳನ್ನೇ ಅಥವಾ ಜಾತಿಮೂಲವಾದಗಳ ಸನಾತನ ಶಿಕ್ಷಣವನ್ನೇ ಸತ್ಯಶೋಧನೆಯ ಮೌಲ್ಯೀಕೃತ ಶಿಕ್ಷಣವೆಂದು ಅಧ್ಯಯನ ಮಾಡಿದಾಗ, ನಿಜವಾದ ಜಾತ್ಯಾತೀತತೆಯನ್ನು ಗ್ರಹಿಸಲು ಸಾಧ್ಯವಿಲ್ಲ. ಸಕಳ ಮಾನವರಲ್ಲಿ ಸಂಬಂಧ, ಸಹೋದರತೆಗಳನ್ನು ಬೆಳೆಸುವುದರಲ್ಲಿ ವಿಫಲತೆಯನ್ನು ಪಡೆಯುತ್ತೇವೆ. ಸಂಘರ್ಷ, ಭಯೋತ್ಪಾದನೆಗಳನ್ನು ಸುತ್ತಲೂ ಬೆಳೆಸಿಕೊಂಡು ಕೋಮುದಳ್ಳುರಿಗಳಿಂದ ಜೀವನ ನಡೆಸಬೇಕಾಗುತ್ತದೆ. ಇದರಿಂದ ತಾತ್ಕಾಲಿಕ ಹರ್ಷದ ಭ್ರಮೆ ಮನುಷ್ಯನನ್ನು ಆವರಿಸಿ ನಿರ್ನಾಮದ ದಾರಿಗೆ ತಳ್ಳುತ್ತದೆ. ಅದರಿಂದ ಜಾತ್ಯಾತೀತತೆಯನ್ನು ಸರಿಯಾದ ರೀತಿಯಲ್ಲಿ ಅರ್ಥಮಾಡಿಕೊಳ್ಳಬೇಕಿದೆ. ಅದನ್ನು ತಪ್ಪಾಗಿ ವಿವರಿಸಿ ಅಪಾರ್ಥಗೊಳಿಸುವುದರಿಂದ ಮಾನವನ ಸಾಂಘಿಕ ಜೀವನಕ್ಕೆ ದಕ್ಕೆಯೇ ಹೊರತು ಏನೂ ಸಾಧಿಸಿದಂತೆ ಆಗುವುದಿಲ್ಲ. ಜಾತಿವಾದ, ಕೋಮುವಾದ, ಲಿಂಗತಾರತಮ್ಯ, ವರ್ಗಗಳಲ್ಲಿ ಅಸಮಾನತೆಗಳು, ಶೋಷಣೆ ಮಾಡುವುದು ಜಾತ್ಯಾತೀತತೆಯ ವಿರೋಧಿ ನಿಲುವುಗಳಾಗಿವೆ.

ವಿಶ್ವ ಇಂದು ಅಣುಬಾಂಬುಗಳನ್ನು ಮಡಿಲಿನಲ್ಲಿ ತುಂಬಿಕೊಂಡಿದ್ದರೂ, ಒಬ್ಬರಿಗೊಬ್ಬರು ದ್ವೇಷ ಸಾಧನೆಯನ್ನು ಮಾಡುತ್ತಿದ್ದರೂ, ವಿಜ್ಞಾನ, ತಂತ್ರಜ್ಞಾನ, ಜಾಗತಿಕ ಆರ್ಥಿಕ ಸುಧಾರಣೆಗಳ ಬೆಳವಣಿಗೆಯಿಂದ ಶಾಂತಿಯನ್ನು ಬಯಸುತ್ತಾ, ಅವುಗಳನ್ನು ವಿನಿಮಯ ಮಾಡಿಕೊಳ್ಳುತ್ತಿವೆ. ಜಾಗತಿಕವಾಗಿ ಸಂಪನ್ಮೂಲದ ಭಾಗವಾಗಿ ಮಾನವನೂ ವಿನಿಮಯಗೊಳ್ಳುತ್ತಿದ್ದಾನೆ. ಸಂಬಂಧಗಳು ಬೆಳೆಯುತ್ತಿವೆ. ವಾಸಸ್ಥಾನಗಳು, ದೇಶಸ್ಥಾನಗಳು ಪ್ರಪಂಚವ್ಯಾಪಿ ಹರಡುತ್ತಿವೆ. ಮಾನವೀಯ ಸ್ವಭಾವಗಳನ್ನು ಹುಡುಕುತ್ತಲೇ, ಅದನ್ನು ತ್ಯಜಿಸಿ ವಿನಾಶದ ಜಗತ್ತನ್ನು ಸೃಷ್ಟಿಸುತ್ತಿರುವುದೂ ನಡೆಯುತ್ತಿದೆ. ಅದರ ಮಧ್ಯೆ, ಮನುಷ್ಯ ಮನುಷ್ಯರಲ್ಲಿ ಪರಸ್ಪರ ಅವಲಂಬನೆಯೂ ಅನಿವಾರ್ಯವಾಗುತ್ತಿದೆ. ಅಗತ್ಯ ಸೌಲಭ್ಯಗಳನ್ನು ಪಡೆಯುವ ನಿಟ್ಟಿನಲ್ಲಿ, ಉತ್ಪಾದಕತೆಯನ್ನು ವಿತರಿಸುವ ಹೆಸರಿನಲ್ಲಿ, ಮಾರುಕಟ್ಟೆಯ ಹೆಸರಿನಲ್ಲಿ, ಕಂಪನಿಗಳ ಹೆಸರಿನಲ್ಲಿ, ಉದ್ಯಮಗಳ ಹೆಸರಿನಲ್ಲಿ, ಮನುಷ್ಯನ ಅಗತ್ಯತೆಗಳು ನಿರಂತರ ವಿನಿಮಯಗೊಳ್ಳುತ್ತಿವೆ. ಅದರಿಂದ ಸಂಪರ್ಕ ಸಂಬಂಧಗಳು ವಿಶ್ವವ್ಯಾಪಿ ಅನಿವಾರ್ಯವೂ ಆಗಿಬಿಟ್ಟಿದೆ. ಪುರಾತನ ಶೋಷಕ ರೂಪಗಳಾದ ಜಾತಿ, ಧರ್ಮ, ಕೋಮು, ವರ್ಣ, ವರ್ಗಗಳ ಸಂಕುಚಿತ ಮಿತಿಯು ಅದರ ಶುದ್ಧತೆಯ ಹೆಸರಿನಲ್ಲಿ ಇಂದು ಉಳಿದಿಲ್ಲ. ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ನೆಲೆಯಲ್ಲಿ ಸಿರಿವಂತಿಕೆ, ಭೋಗ ಜೀವನ, ಐಷಾರಾಮಿ ಹೆಸರುಗಳ ಅಲ್ಪ ತೃಪ್ತಿಗೆ ಸಮಾಜದಲ್ಲಿ ಪಟ್ಟಭದ್ರ ಮೂಲಭೂತವಾದಿಗಳು, ಪುರೋಹಿತ ಕೋಮುವಾದಿಗಳು ಈ ಜಾತಿ, ಧರ್ಮ, ಕೋಮು, ವರ್ಣ, ವರ್ಗಗಳ ಅವಶ್ಯಕತೆಯನ್ನು ಉಳಿಸುವ ಪ್ರಯತ್ನವನ್ನು ಮಾಡುತ್ತಿವೆ. ಅಂತಹ ಸಮಾಜ ಘಾತುಕ, ಸಮಾಜದ ಅಶಾಂತಿಗೆ ಕಾರಣವಾಗುವ, ಸಾಮರಸ್ಯ ಕದಡುವ, ಸೌಹಾರ್ಧತೆಗೆ, ಭಂಗತರುವ, ಬ್ರಾತೃತ್ವಗಳಿಗೆ ಕುತ್ತು ತಂದು ಸಮಾಜದಲ್ಲಿ ಅಶಾಂತಿಯನ್ನು ತುಂಬುವ, **ಜಾತಿ, ಧರ್ಮ, ಕೋಮು, ವರ್ಣ, ವರ್ಗಗಳ ಸಂಕುಚಿತ ಮಿತಿಯನ್ನು ಮೀರುವ ಸ್ವಭಾವವೇ ಜಾತ್ಯಾತೀತತೆ.**

ಆದರೆ ಭಾರತದಲ್ಲಿ ಜಾತಿ ವ್ಯವಸ್ಥೆ ತಳವೂರಿದೆ. ಜಾತಿಯನ್ನು ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಗುರುತು ಎಂದು ಭಾವಿಸುತ್ತಾನೆ. ಅಸ್ಪೃಷ್ಯತೆಯ ಕಾರಣ, ಕೆಲವು ಸಮುದಾಯಗಳು ಜಾತಿಯಿಂದ ಶೋಷಣೆಗೆ ಒಳಗಾಗಿವೆ ಎಂಬುದು ಸತ್ಯವಾದರೂ, ಪರಿಶಿಷ್ಟಜಾತಿ, ವರ್ಗಗಳ ಮತ್ತು

ಹಿಂದುಳಿದ ವರ್ಗಗಳ ಮೀಸಲಾತಿಯ ಸೌಲಭ್ಯಗಳು, ಅಭಿವೃದ್ಧಿಯ ಹೆಸರಿನಲ್ಲಿ, ಜಾತಿಯ ಹೆಸರಿನಲ್ಲಿ ರಾಜಕಾರಣಿಗಳು ಆರ್ಥಿಕವೃದ್ಧಿ ಮತ್ತು ಸಹಕಾರ ನೀಡುತ್ತಿರುವುದರಿಂದ ಜಾತಿಗಳು ಸಂಘಟನೆಗೊಳ್ಳುತ್ತಿವೆ. ಇದರ ಪರಿಣಾಮ ಜಾತಿನಾಯಕರನ್ನು ಪುರಾಣ, ಐತಿಹಾಸಿಕ ಅಥವಾ ಯಾವುದೇ ನೆಲೆಯಿದ್ದರೂ ಗುರುತಿಸಿ ಹೊರಗೆ ತರುತ್ತಿದ್ದಾರೆ. ಜಯಂತಿಗಳ ಹೆಸರಿನಲ್ಲಿ, ಆರಾಧನೆಗಳ ಹೆಸರಿನಲ್ಲಿ, ಸಮುದಾಯಗಳ ಅಭಿವೃದ್ಧಿಯ ಹೆಸರಿನಲ್ಲಿ ಜಾತಿ ಅನಿವಾರ್ಯವೆಂಬಂತೆ ಭಾಸವಾಗುತ್ತಿದೆ. ಆಧುನಿಕತೆಯ ಸಂದರ್ಭದಲ್ಲಿ ಅಭಿವೃದ್ಧಿ ಪ್ರತಿಯೊಂದು ಜನಾಂಗದ ಕನಸಾಗಿರುವುದರಿಂದ, ಕೆಳವರ್ಗಗಳ ಅಭಿವೃದ್ಧಿಗೆ ಮಾತ್ರ ಮೀಸಲಾತಿ ಇರುವುದನ್ನು ವಿರೋಧಿಸುತ್ತಲೇ ತಮಗೂ ಮೀಸಲಾತಿ ಅಗತ್ಯವಿದೆ. ನಾವು ಹಿಂದುಳಿದಿದ್ದೇವೆಂದು ಎಷ್ಟೋ ಮೇಲ್ಜಾತಿಗಳು ಎಂದು ಕರೆಯಿಸಿಕೊಳ್ಳುತ್ತಿದ್ದ ಸಮುದಾಯಗಳು, ತಳಸಮುದಾಯಗಳ ಸೌಲಭ್ಯಗಳ ಮೇಲೆ ಕಣ್ಣಿಟ್ಟು, ಪರಿಶಿಷ್ಟಜಾತಿ, ವರ್ಗ, ಹಿಂದುಳಿದಿರುವ ವರ್ಗಗಳಲ್ಲಿ ಗುರುತಿಸಿಕೊಳ್ಳಲು ತುದಿಗಾಲಿನಲ್ಲಿ ನಿಂತು ಹೋರಾಟ ಮಾಡುತ್ತಿದ್ದಾರೆ. ಇದರಿಂದ ಜಾತಿ ವ್ಯವಸ್ಥೆಯಲ್ಲಿದ್ದುಕೊಂಡೇ ಜಾತ್ಯಾತೀತತೆಯ ಕಡೆ ಒಲವು ಬೆಳೆಸಿಕೊಳ್ಳುತ್ತಿರುವುದು, ಜಾತಿಗಳ ನೆಲೆಯಲ್ಲಿ ಸಮಾನತೆಯ ಕೂಗು ರಾಜಕಾರಣಕ್ಕಾದರೂ ಅನಿವಾರ್ಯವೆಂಬಂತೆ ಭಾಸವಾಗುತ್ತಿರುವುದು, ಸಂತೋಷದ ವಿಷಯವೆಂಬಂತೆ ಕಂಡರೂ, ಅದರಿಂದ ಸಮುದಾಯಗಳಲ್ಲಿ ಸಂಘರ್ಷವಾಗುದಿಲ್ಲವೆಂಬ ಭರವಸೆ ನೀಡಲು ಸಾಧ್ಯವಿಲ್ಲ. ಇದರ ಮಧ್ಯದಲ್ಲಿಯೇ ಚಾತುರ್ವರ್ಣ ವ್ಯವಸ್ಥೆಯ ನಿರ್ಮಾತೃಗಳ ವಂಶಸ್ಥರು ಎಂದು ಗುರುತಿಸಿಕೊಳ್ಳುವವರು, ದೇವರು ಧರ್ಮಗಳ ಹೆಸರಿನಲ್ಲಿ ಮತ್ತೇ ಅದೇ ಯಥಾಸ್ಥಿತಿ ವಾದವನ್ನು ಮಂಡಿಸುತ್ತಾ ಧರ್ಮ, ಜಾತಿ ಸಂಘರ್ಷಕ್ಕೆ ದಾರಿಮಾಡಿಕೊಡುತ್ತಿರುವುದು ವಿಷಾಧನೀಯ. ಅದನ್ನು ತಡೆಯಬೇಕಾದ ಅನಿವಾರ್ಯತೆ, ಭಾರತೀಯ ಪ್ರತಿ ನಾಗರೀಕನ ಜವಾಬ್ದಾರಿ ಆಗಬೇಕಿದೆ.

ಆರ್ಯ ಮೂಲದ ಸನಾತನ ಧರ್ಮದ ಅನುಯಾಯಿಗಳು ಧರ್ಮದ ನೆಲೆಯಲ್ಲಿ ಅಸ್ತಿತ್ವವನ್ನು ಹುಡುಕಾಡಿದರೆ, ಭಾರತದ ಮೂಲ ಅಥವಾ ಆದಿ ಹಿಂದೂಗಳು ಶ್ರಮ, ಭೂಮಿತಾಯಿಯ ಮಡಿಲು ಮತ್ತು ಇತ್ತೀಚೆಗೆ ಸರ್ಕಾರದ ನೌಕರಿ, ವಿವಿಧ ಉದ್ಯಮಗಳ ಹುಡುಕಾಟದಲ್ಲಿ ಅಧಿಕಾರ–ರಾಜಕಾರಣದ ಪರಿಚಯ ಪಡೆಯುತ್ತಿದ್ದಾರೆ. ಅದಕ್ಕೆ ಜಾತಿಯ ಬಳಕೆ ಉಪಯೋಗವಾಗುತ್ತಿದೆಯೆಂಬ ಭ್ರಮೆಯೂ ಇಣುಕಿನೋಡುತ್ತಿದೆ. ಬಹುತೇಕ ಶೂದ್ರರು ಹಿಂದೂ ಎಂಬ ಹೆಸರಿನಿಂದ ಭಾವಪರವಶರಾಗುದಿಲ್ಲ. ಆದರೆ ವೈಧಿಕ ಧರ್ಮ ಹುಟ್ಟು ಹಾಕಿದ ಜಾತಿ ಪದಕ್ಕೆ ವೈಚಾರಿಕ ನೆಲೆಯಲ್ಲಿ ಬೇಸರವಿದ್ದರೂ, ಅನಿವಾರ್ಯತೆಯ ನೆಲೆಯಲ್ಲಿ ಭಾವಪರವಶರಾಗುದುಂಟು. ಸರ್ಕಾರಿ ದಾಖಲೆಗಳಲ್ಲಿ ಕಾಲಂ ತುಂಬಲು ಹಿಂದೂ ಪದ ಬಳಸುತ್ತಾರೆಂಬುದು ನಿಜವಾದರೂ, ಇವರಿಗೆ ಹಿಂದೂ ಎನ್ನಿಸಿಕೊಳ್ಳುವುದಕ್ಕಿಂತಲೂ ಭಾರತೀಯ ಎನ್ನಿಸಿಕೊಳ್ಳುವುದು ಭಾವಾದ್ರೇಕಕ್ಕೆ ಕಾರಣವಾಗುತ್ತದೆ. ನನ್ನ ದೇಶ ಭಾರತ, ನಾಡು, ನುಡಿ ಎಂಬುದು ಅತ್ಯಂತ ಪ್ರೀಯವಾದುದು. ಭಾರತೀಯ ಎನ್ನಿಸಿಕೊಳ್ಳುವುದು ಹೆಮ್ಮೆಯ ವಿಷಯ. ಹಿಂದೂ ಅದು ವೈಯಕ್ತಿಕ ಅನುಭೂತಿ ಅಷ್ಟೇ. ಆದರೆ ಹಳೆಯ ಭಾರತದ ವೈಧಿಕ ಧರ್ಮ ಹುಟ್ಟು ಹಾಕಿದ ಜಾತಿ ಮಾತ್ರ ಅವರ ಬದುಕನ್ನು ನಿರ್ಧರಿಸುತ್ತಿದೆ, ಧರ್ಮ ಐಚ್ಛಿಕವಷ್ಟೇ.

ಭಾರತೀಯ ಹಿಂದುಗಳೆಲ್ಲರೂ ಜಾತಿಯನ್ನು ಮಾತ್ರ ಹಿಡಿದಿದ್ದಾರೆ. ಅಥವಾ ಅದೇ ಅವರನ್ನು ಬಿಟ್ಟು ಬಿಡಲಾರದಂತೆ ಹಿಡಿದಿದೆ. ಅದರಿಂದಲೇ, ಅವರು ತಮ್ಮ ನೋವು–ನಲಿವುಗಳಲ್ಲಿ ಅಲ್ಪ ತೃಪ್ತಿಯನ್ನು ಅನುಭವಿಸುತ್ತಿದ್ದಾರೆ. ಆಗಾಗ ಅಧಿಕಾರ, ರಾಜಕಾರಣಕ್ಕಾಗಿ ಸನಾತನ ಹಿಂದೂಗಳು, ಭಾರತೀಯ ಹಿಂದುಗಳೆಲ್ಲರೂ ಒಂದೇ ಎಂಬ ಧರ್ಮದ ಅಫೀಮನ್ನು ಹರಡಲು ಪ್ರಯತ್ನ ಪಡುತ್ತಾ ಹೋರಾಡುತ್ತಾರೆ. ಸುಶಿಕ್ಷಿತ ಹಿಂದುಳಿದ ವರ್ಗವನ್ನು, ಪ್ರಗತಿಪರ ಹಿಂದೂ, ಮುಸ್ಲಿಂ ಅಥವಾ ಭಾರತೀಯ ಸಂವಿಧಾನದ ಆಶಯಗಳ ಬಗ್ಗೆ ನಂಬಿಕೆಯಿಟ್ಟವರನ್ನೂ ಸಹ ಜಾತ್ಯಾತೀತವಾದಿಗಳು, ಧರ್ಮ ವಿರೋಧಿಗಳು ಎಂದು ಜರಿದು, ಆವೇಶ ಭರಿತರಾಗುತ್ತಾರೆ. ಅಷ್ಟೇ ಅಲ್ಲದೆ, ಹಿಂದುಗಳಿಗೆ ಪ್ರೇರಣೆ ನೀಡುತ್ತಿದ್ದೇವೆಂದು ಭ್ರಮೆಗೆ ಬೀಳುತ್ತಾರೆ. ಆದರೆ ಬಹಳಷ್ಟು ಆದಿ ಹಿಂದೂಗಳು ಮತ್ತು ಕೆಲವರಾದರೂ ಸನಾತನ ಹಿಂದೂಗಳು ಅದರ ಮೂಲ ಕೋಮುವಾದಿತನದಿಂದ ಬಿಡಿಸಿಕೊಳ್ಳಲು ನಿರ್ಧರಿಸಿ, ಅದು ಹುಟ್ಟು ಹಾಕಿದ ಜಾತಿ ಮೂಲವನ್ನು ಮರೆತು, ಜಾತ್ಯಾತೀತತೆಯನ್ನು ಬೆಳೆಸಿಕೊಂಡು, ಇಂದಿನ ಅಖಂಡ ಭಾರತದ ಹಲವು, ಧರ್ಮ, ಸಂಸ್ಕೃತಿ, ಸಮುದಾಯಗಳಲ್ಲಿ ಬೆರೆತು ಮಾನವತನವನ್ನಷ್ಟೇ ಗುರುತಿಸಿಕೊಂಡು, ವಿಶ್ವಮಾನವತೆಗಾಗಿ ದುಡಿಯಲು ಕಂಕಣಬದ್ಧರಾಗುತ್ತಿದ್ದಾರೆ. ಜಾತಿ, ಧರ್ಮ, ಕೋಮಿಗಿಂತಲೂ ಮಾನವ ಪ್ರೇಮ ಮುಖ್ಯವಲ್ಲವೇ. ಅದೇ ನಮ್ಮ ಗುರಿಯಾಗಬೇಕೆಂಬ ಧೋರಣೆ ಸ್ವಾಗತಾರ್ಹ. ಜಾತ್ಯಾತೀತತೆಯ ಹುಟ್ಟಿಗೆ ಕಾರಣವಾದ ಬುದ್ಧ, ಬಸವಣ್ಣ ಜೊತೆಗೆ ಡಾ.ಬಿ.ಆರ್ ಅಂಬೇಡ್ಕರ್, ಲೋಹಿಯಾ ಮೊದಲಾದ ಹಲವಾರು ಆಧುನಿಕ ವಿಚಾರಚಿಂತಕರ ಅನುಭವ ನುಡಿಗಳು, ಅವರ ವಿಚಾರಶಕ್ತಿ ಮತ್ತು ಮಹಾಮಾನವತ್ವ, ಮಹಾತ್ಮ ಗಾಂಧೀಜಿಯ ಅಹಿಂಸೆ, ಸತ್ಯ, ಶಾಂತಿಗಳು ಜಗತ್ತನ್ನು ಬೆಳಗುದರಲ್ಲಿ ಎರಡು ಮಾತಿಲ್ಲ. ವಿಶ್ವ ಬಗಲಿನಲ್ಲಿ ಬಂದೂಕು, ಬಾಂಬುಗಳನ್ನು ಇಟ್ಟುಕೊಂಡಿದ್ದರೂ ಶಾಂತಿಮಂತ್ರವನ್ನು ಬೋಧಿಸುತ್ತಿದೆ. ಅದು ಅನಿವಾರ್ಯವೂ ಕೂಡ. ಇಂದು ಮಾನವ ಸಂಬಂಧಗಳು ಹಲವು ಕಾರಣಗಳಿಗೆ ಕೂಡಿಕೊಳ್ಳುತ್ತಿರುವುದು ಈ ಜಾತ್ಯಾತೀತತೆಗೆ ಪುಷ್ಟಿಕೊಡುತ್ತಿದೆ.

ಧರ್ಮದ ಹೆಸರಿನಲ್ಲಿ, ಜಾತಿಯ ಹೆಸರಿನಲ್ಲಿ ಮೌಢ್ಯವನ್ನು ಹರಡುವ, ಅದರಿಂದ ರಾಜಕೀಯ ಮತ್ತು ಆರ್ಥಿಕ ಲಾಭ ಪಡೆಯುವ ಹುನ್ನಾರದ ಭಾಗವಾಗಿ ಜಾತ್ಯಾತೀತತೆಯ ವಿರೋಧ ಅಭಿವ್ಯಕ್ತವಾಗುತ್ತದೆ. ಭಾರತೀಯ ಪುರೋಹಿಶಾಹಿಯ ಮೌಲ್ಯಗಳು, ಹಾಗೆನ್ನುವುದಕ್ಕಿಂತ ತಂತ್ರಗಳು ಜಾತಿ ವ್ಯವಸ್ಥೆಯ ಪರವಾಗಿರುತ್ತದೆ. ಅದನ್ನು ಧರ್ಮದ ಹೆಸರಿನಲ್ಲಿ ಭಾವುಕತೆಗೆ ಒಡ್ಡಿ, ಅದರಿಂದ ಇತರೇ ಹಿಂದುಳಿದ (ಶೂದ್ರ) ಕೆಲವು ಸಮುದಾಯಗಳನ್ನು ಸಹಾಯಕ್ಕೆ ಬಳಸಿಕೊಂಡು ಸುಖಿಸುವ ರಾಜಕೀಯ ಪ್ರೇರಿತವು ಮೌಢ್ಯದ ಪರವಾಗಿರುತ್ತದೆ. ಬಹುತೇಕ ಜನ ನಂಬುವ, ಪ್ರೇರಣೆಗೊಳ್ಳುವ, ಧರ್ಮದ ಹೆಸರಿನಲ್ಲಿ ಗುರುತಿಸಲಾದ ದೈವ, ದೇವರುಗಳು, ಸಂತರನ್ನು ಮೌಢ್ಯತೆಯಲ್ಲಿ ಬಂಧಿಸಿ, ಅವರ ನೈಜ ಚಿಂತನೆಗಳನ್ನು ಗಾಳಿಗೆ ತೂರಿ, ಅವರ ಹೆಸರಿನಲ್ಲಿ ಪವಾಡ, ಕಟ್ಟುಕತೆಗಳನ್ನು ಕಟ್ಟಿ, ಅವರು ಧರ್ಮ ರಕ್ಷಕರು ಎಂದು ಬಿಂಬಿಸಲಾಗುತ್ತಿದೆ. ಪುರಾಣ ಕಟ್ಟುಕತೆಗಳಲ್ಲಿರುವ ಅವರ ಕಥೆ ಧರ್ಮ ಸೂಕ್ಷ್ಮಗಳೆಂದು ನಂಬಿಸಿ, ಅವರ ಹೆಸರಿನಲ್ಲಿ ಸಂಘಟನೆಯನ್ನು ಮಾಡುತ್ತಾ, ಲಾಭ ಪಡೆಯುವುದು, ಹಾಗೆಯೇ ಜನಸಾಮಾನ್ಯರ ಭಾವುಕ ವಿಷಯಗಳನ್ನು ಗುರುತಿಸಿ ಉದಾಹರಣೆ ನಾಡು–ನುಡಿ, ದೇಶದ ಐಕ್ಯತೆ, ಒಗ್ಗಟ್ಟು

ವಿಷಯಗಳನ್ನು ತಮ್ಮ ಸ್ವಾರ್ಥ ಸಿದ್ಧಾಂತಗಳಲ್ಲಿ ತಳಕು ಹಾಕಿ, ಮುಖ್ಯವಾಹಿನಿಯಲ್ಲಿ ತಂದು ಬ್ಲಾಕ್ ಮೇಲ್ ಮಾಡುವುದು. ತಾವು ಮಾತ್ರ ದೇಶ ಭಕ್ತರು, ಧರ್ಮ ರಕ್ಷಕರು, ನೀವೂ ಸಹ ನಮಗೆ ಸಹಕರಿಸದಿದ್ದರೆ ಧರ್ಮ ವಿರೋಧಿಗಳು, ದೇಶ ದ್ರೋಹಿಗಳು ಮೊದಲಾದಂತೆ ಚರ್ಚಿಸಿ, ಬಹುಸಮುದಾಯಗಳ ಹಿತವನ್ನು ನಿರ್ಲಕ್ಷಿಸಿ ಕೋಮು, ಜಾತಿಗಳ ದಳ್ಳುರಿಗೆ ಅವಕಾಶವನ್ನು ಕಲ್ಪಿಸುವುದು, ಅದರಿಂದ ಸಮಯ ಸಾಧಕತನದೊಂದಿಗೆ ಸ್ವಾರ್ಥ ಸಾಧನೆ ಮಾಡಿಕೊಳ್ಳುವುದು, ಜಾತಿವಾದಿ ಮತ್ತು ಪೂರ್ವ ಪುರೋಹಿತಶಾಹಿಯ ಲಕ್ಷಣಗಳನ್ನು ಬೆಳೆಸುವುದು, ಅದನ್ನು ಆಧುನಿಕತೆಯ ಸಂದರ್ಭದಲ್ಲಿ ಹೊಸ ಹುನ್ನಾರಗಳ ರೀತಿಯಲ್ಲಿ ಹೆಣೆಯುವುದು, ಜಗತ್ತಿನ ಯಾವುದೇ ಜನಸಮುದಾಯಗಳ ಒಗ್ಗಟ್ಟಿಗೆ ಮಾರಕ. ಪ್ರಜ್ಞಾವಂತ ಯುವ ಸಮಾಜ ಇತಿಹಾಸವನ್ನು, ಅದರಿಂದ ಆಗಿರುವ ಅನ್ಯಾಯ, ನಷ್ಟಗಳನ್ನು ಗುರುತಿಸಬೇಕಿದೆ. ದೇವರು, ಧರ್ಮ, ಜಾತಿ, ವರ್ಗಗಳು ಇಂದು ಮೌಢ್ಯತೆಯಿಂದ ಹೊರಬರಬೇಕಾಗಿದೆ. ಮಾನವೀಯತೆಯಿಲ್ಲದ ಧರ್ಮ, ಸೌಹಾರ್ದತೆ ಬಯಸದ ಜಾತಿ, ಸಾಮರಸ್ಯ ಬೆರಸದ ಮತ, ಸ್ವಾತಂತ್ರ್ಯ ಕೊಡದ ಕೋಮು, ಸಮಾನತೆ ಬಯಸದ ಗೋತ್ರ ಸಮುದಾಯಗಳು, ಸರ್ವರನ್ನೂ ಪ್ರೀತಿಸದ ದೇವರು ಆಧುನಿಕ ಸಮಾಜದಿಂದ ದೂರ ಹೋಗಬೇಕಿದೆ. ಶಿವಶರಣ ಬಸವಣ್ಣ ಹೇಳುವಂತೆ " ಇವನಾರವ ಇವನಾರವನೆಂದೆನಿಸದಿರಯ್ಯಾ, ಇವ ನಮ್ಮವ, ಇವ ನಮ್ಮವ ಎನಿಸಯ್ಯಾ ಕೂಡಲಸಂಗಮದೇವಯ್ಯಾ" ಎಂದು ಬೇಡುವ ಧೈನ್ಯಭಾವ, ಮಾನವನ ಹೃದಯ ಶ್ರೀಮಂತಿಕೆಯನ್ನು ಆಕಾಶದೆತ್ತರಕ್ಕೆ ನಿಲ್ಲಿಸುತ್ತದೆ. ಅದರಿಂದ **ಮಾನವ ಪ್ರೇಮದ ಜಾತ್ಯಾತೀತತೆ,** ಸಕಳ ಸಮುದಾಯಗಳಲ್ಲಿ ಸ್ವಾತಂತ್ರ್ಯ, ಸಮಾನತೆ, ಸಹೋದರತೆಗಳನ್ನು ಬಿಂಬಿಸುವ, ಎಲ್ಲಾ ಜಾತಿ, ವರ್ಗ, ಧರ್ಮ, ವರ್ಣಗಳನ್ನು ಒಂದಾಗಿ ಕೂಡಿಸುವ ಭಾವಬಂಧವೆಂಬುದನ್ನು ಅರಿತುಕೊಳ್ಳಬೇಕು. ಅದಕ್ಕಾಗಿಯೇ ಅದು ಪ್ರಸ್ತುತವಾಗುತ್ತಲೇ ಇರುತ್ತದೆ. ಅದು ನಮ್ಮ ಭಾರತೀಯ ಸಂವಿಧಾನದ ಸತ್ವದ ಸಾರ, ಬಹುಸಮಾಜಗಳ ರಕ್ಷಕ, ಪ್ರಜಾಪ್ರಭುತ್ವದ ಕಳಸ ಆಗಿ, ಭಾರತಕ್ಕೆ ಹೆಮ್ಮೆಯ ಮಕುಟವೆಂಬುದು ನಿರ್ವಿವಾದ.